48 ದದೆ ಬಂದಂತೆ ಗೋತ್ರಬ್ರಜಕೊಪ್ಪಿರೆ ಶಿಷ್ಟೇಷ್ಟಾಳಿಗೆಲ್ಲಂ ಸುರತರು ಫಲವಾದಂತೆ ಗಂಭೀರ ಗಂಗಾಧರ-
ದೇವಪ್ರ-

49 ಖ್ಯನುದ್ಯೋ[ತ್ಸತಿ]ಗುಣವಿಳಸಚ್ಛೌಡಿಯಕ್ಕಂಗೆ ಲಕ್ಷ್ಮೀಕರಜಾತದ್ವಾಮದೆಂಡಾಧಿಪ ಹರಿಹರಮಾದ-
ಯ್ಯೆನೆಂಬ ತ-

50 ನೂಜರು ॥ ಅವರಿಂದೆಗ್ರಜನತ್ಯುದಾತ್ತಮಹಿಮಂ ಶ್ರೀವಾಮದೆಂಡಾಧಿಪಂಗೆ ನಧು ಪ್ರಖ್ಯೆ ಪತಿಬ್ರತಾಚರಿ-

51 ತ ಭಾಸ್ವದ್ದೇವಕೇದೇವಿ। ಭಾಗ್ಯವತಿ ಸ್ತುತ್ಯೆ ಮಹಾತ್ಮನೆಲ್ಲಭೆ ಲಸೆತಾಸ್ಸವಿತ್ರಿದೇವಿ ಪ್ರಸೆ(ಂ)ನ್ನವರಶ್ರೀ-

52 ಲಲನಾಸಮಾನಮೆನೆ ತಾಂ ಧನ್ಯಂ ಧರಾಚಕ್ರದೊಳು ॥ ಕ । ಮನುಚರಿತನಖಿಳಗುಣಸಜ್ಜನವಿನತಂ ಮಂ-
ತ್ರಿದಾವಣಂ

53 ಜಗದಾರಾಧ್ಯನುಪಮಸುಖರೂಪಪ್ರಭುವಿನಾಚರಣಸರೋಜಭೃಂಗ ಮೆನುಜೋತ್ತುಂಗ ॥ ಆ ಮಂತ್ರಿ
ಮುಖ್ಯ-

54 [ನ]ನುಜಂ ಸಾಮಜಬಳಯುತನಮಾತ್ಯ ಹರಿಹರನ ಮಹಾಪ್ರಮೆದಸೆತಿ ಲಕ್ಷ್ಮೀಗುಣಸ್ತೋಮೆಯೆನಲ್ವ-
ನಿತೆ-

55 ಯಸ್ಸರ್ವಮಾನಮೆ ಧರೆಯೊಳು॥ ಆತನನುಜಾತನವನೀಖ್ಯಾತಂ ಮಾಧವನ ವಧು ಪತಿಬ್ರತೆಗುಣದೊಳ್ಸೀತೆಗ-

56 ರುಂಧತಿಗಂಬುಜ[ಜಾತ]ಗೆ ದೊರೆ ಗೌರಿಯನ್ನಕ್ಕನವನೀತಳದೊಳು॥ ಸ್ವಸ್ತಿ ಶ್ರೀಮತು ಕಕವರ್ಷದ ಅಂಕಿಸಿ ನೆಯ ಪ್ರ-

57 ಜಾಪತಿಸಂವತ್ಸರದ ಮಾಘ ಶುದ್ಧ ತದಿಗೆ ಆದಿತ್ಯವಾರದಂದು ಶ್ರೀಮನ್ಮಹಾಮಂಡಳೀಶ್ವರಂ ಹೊಯ್ಸಣ ವಿಷ್ಣುವರ್ಧನವೀರಬ-

58 ಲ್ಲಾಳದೇವನು ನೊಣಂಬವಾಗಿ ಮೂವತ್ತಿಚ್ಚಾಯಿರ ಬನವಸೆ ಪನ್ನಿಚ್ಚಾಯಿರ ಹುಲಿಗೆಜೆ ಮೂನೂಱು ಬೆಳುವಲವೆರಡು ಮಾಸೆವ-

59 ಡಿ ಹೆದ್ದೊಜೆ ಪರ್ಯ್ಯಂತಂಬರವಾಳುತ್ತ ವಿಜಯಸೆಮುದ್ರವೆನಿಪ ಹಳ್ಳವುರನೆಲೆವೀಡಿನಲಿದ್ದು ದುಷ್ಟ-ನಿಗ್ರಹಶಿಷ್ಟಪ್ರತಿಪಾಳನಂ ಮಾ-

60 ಡಿ ಸುಖದಿ ರಾಜ್ಯಂಗೆಯ್ಯುತ್ತಿರಲಾತನ ಪಟ್ಟದರಸಿ ಪದುಮಲದೇವಿಯರು ಹೊಸಹಡಂಗಿಲೆಯನಾಳು-ತ್ತಿವಿರ್ ಅವರ ಮಾವ ನ .

61 ಪರಸೆರಧಿಕಾರವಾಗಲವರು ಮುಖ್ಯವಾಗಲಶೇಷಮಹಾಜನ ನೂಱಿಪ್ಪತಿಂಬಸ್ವಾಮಿಗಳ ದಿವ್ಯಶ್ರೀಪಾದ-ಪದ್ಮಂಗಳಿಗೆ ಮಹಾಪ್ರಧಾ-

62 ನಂ ಗಂಗಿಮಯ್ಯನಾಯಕದಾವಣ್ಣಂಗಳು ನಮಸ್ಕಾರಮುಂ ಮಾಡಿ ಧರ್ಮ್ಮಪ್ರಸಂಗಮಂ ಬಿನ್ನಪಂ ಗೆಯ್ಯಲವರು ಹಿರಿಯೆಕೆಱೆಗೆ ತುಂಬಿನಕೆಱೆಗಂ

63 ಪಡಿಸಲಿಸುವನ್ತಾಗಿ ಧರ್ಮ್ಮವ ನೀಂ ಮಾಡವೇಳ್ಕೆಂದು ಬೆಸಸೆಲ್ಮಹಾಪ್ರಸಾದವೆಂದು ಕೈಕೊಂಡೂರಡೆಯರ ಶ್ರೀಮಾನ್ಯದ ಭೂಮಿಯ ಕ್ರ-

64 ಯಮಂ [ಕೊಟ್ಟು] ಭೂಮಿಯುಂ ಕಾಲ್ಗಚ್ಚರ್ದ್ದ ಕೈಧಾರೆಯಂ ಕೊಂಡಾ ಮಹಾಜನಂಗಳ ಸಂನಿಧಿಯ-ಲು ದಾವಣ್ಣಂಗಳಿರಡುಂ ಕೆಱೆಗೆ ಬಿಟ್ಟ ಧರ್ಮ್ಮ

65 ಊರಡೆಯ . . ಶ್ರೀಮಾನ್ಯದ ಎರೆ ಮತ್ತರು ೪೫ ಕ್ಕಂ ಸೀಮೆ । ಪಡುವ ಕೊಳಚೆಯೋಣಿ ಬಡಗ ಮಾರ್ತಿಮೆಗೆಯಿ

66 ಮೂಡ । ದೇವನಾಥದೇವರ ಕೆಯಿ । ತೆಂಕಣಮೇರೆ ದಬ್ಬಣಿಗಗೆಯಿ ತೋಟಗಟ್ಟ ಮತ್ತ ೨೦ ಕ್ಕಂ ಸೀಮೆ. ಪಡುವ ಈಚಿ[ಮೆ]-

67 ದೋಟದ ವೋಣಿ ಬಡಗಣಮೇರೆ ಆ ವೋಣಿ । ಮೂಡಣಮೇ . ಊರಡೆಗೊಳ । ತೆಂಕಮೇರೆ ಮೆದ್ದೆ-ಯೊವಾಳಾಂಡ । ಕೆಂಗಾಡ ಹೊಲದಸೀಮೆ ।

68 ಪಡುವ ಚಿಕ್ಕಬಿಳಲು । ಬಡಗಮೇರೆ ಬಳ್ಳಿರೆಯ ಹೊಲ ಮೂಡಲು ಹಗಲಹರಸೀಮೆ । ತೆಂಕಣಮೇರೆ ಬೇವಿನಕೆಱೆಯ ಬಡಗ-

69 ಣಕೋಡಿ ॥ ಊರಡಗೇರಿಯ ಬಡಗವಾಗಿಲ ಮನೆಯೊಂದು ॥ ಇನ್ತಿನಿತು ಧರ್ಮ್ಮಮಂ ಮಹಾಜನ ನೂ-ಱಿಪ್ಪತಿಂಬರು

70 ಪ್ರತಿಪಾಳಿಸುವೆರು॥ ಸ್ವದತ್ತಂ ಪರದತ್ತಂ ವಾ ಯೋ ಹರೇತು ವಸುಂಧರಾಂ ಷಷ್ಟಿವರ್ಷಸಹಸ್ರಾಣಾಂ ವಿಷ್ಠಾಯಾಂ ಜಾಯತೇ ಕ್ರಿಮಿಃ ॥

## No. 331.

(*A.R. No.* 90-*A of* 1904.)

ON THE SIXTH SLAB SET UP ON THE SOUTH SIDE OF THE KALLESVARA TEMPLE AT BAGALI, HARAPANAHALLI TALUK, SAME DISTRICT.

This is dated **Aṅgirasa, Mārgaśira,. ba 8, Sōmavāra,** corresponding to **A.D. 1212 December 17, Monday.** The *Mahāmaṇḍalēsvara Vīrajagadāla* **Bammidēvarasa,** son of **Hariharadēva** and grandson of **Nāchidēva** of **Koṭṭūru,** is said to have made a gift of a large tract of land for the service of the god Kalidēvasvāmi. The gift was made in the presence of his teacher **Sōmayājya-Hiriyaṇṇa** of **Arasiyabīḍu.**

1 [t] ಜಯತ್ಯೇಷ ಮ-

2 ಹಾದೇವೋ ವಿಶ್ವರಕ್ಷಾವಿಚಕ್ಷಣಃ ಯಸ್ಸಪ್ತ ಮುನಿಮೋದಾತ್ತ್ಥಮಾವಿಭ್ಭರ್ತ್ತಃ ಕಲಾನಿಧಿಃ ॥

3 ಸ್ವಸ್ತಿ ಶ್ರೀಮತು ಆಂಗಿರಸಸಂವತ್ಸರದ ಮಾರ್ಗ್ಗಶಿರ ಬಹುಳದಷ್ಟಮಿ ೪ ಸೋಮವಾರದಂ-

4 ದು ಮಹಾಮಂಡಳೀಶ್ವರಂ ಕೊಟ್ಟೂರ ನಾಚಿದೇವನ ಮಂಮ ಹರಿಹರದೇವನ ಪುತ್ರನುಂ ಶ್ರೀಮ-

5 ನ್ಮ[ಹಾ*]ಮಂಡಳೀಶ್ವರಂ ವಿಪ್ರಪ್ರಸಾದ ವೀರಜಗದಾಳ ಬಂಮಿದೇವರಸರು ಸುಖಸಂಕಥಾವಿನೋ-

[1] This is written in continuation of No. 319.

6 ದದಿಂ ರಾಜ್ಯಂಗೆಯ್ಯುತಿರ್ದು ತಮ್ಮಾರಾಧ್ಯರರಸಿಯಬೀಡಿನ ಸೋಮಯಾಜ್ಯ ಹಿರಿ-
7 ಯಣ್ಣಂಗಳ ಸಂನಿಧಿಯಲು ಶ್ರೀಮತು ಹರಿಶ್ಚಂದ್ರದತ್ತಿಯಮಹಾಗ್ರಹಾ-
8 ರಂ ಬಾಳ್ಗುಳಿಯ ಶ್ರೀಸ್ವಯಂಭುಕಲಿದೇವರ ಅಂಗಭೋಗರಂಗಭೋಗಕ್ಕಂ ಅಲ್ಲಿಯ
9 ಮಹಾಜನಕ್ಕಂ ನಂದಿಯಬೇಹೂರ ಮೇಲಾಳಿಕೆ ಮಂನೆಯಸಹಿತ ಆ ವೂರ
10 ಚತುರಾಘಾಟ ಸೀಮೆಯಿಂದೊಳ ಸಮಸ್ತಭೂಮಿಯನಿತುಮಂ ಸರ್ಬ್ಬಾಬಾಧೆಪರಿಹಾ-
11 ರವಾಗಿ ಧಾರಾಪೂರ್ಬ್ಬಕಂ ಮಾಡಿ ಬಿಟ್ಟ ಧರ್ಮ್ಮ ॥

## No. 332.

(*A.R. No.* 269 *of* 1918.)

ON A SLAB SET UP IN THE KUMARASVAMI TEMPLE AT MUTTIGI, SAME TALUK AND DISTRICT.

This is dated **Śaka 1136, Bhāva, Vaiśākha, śu. 1, Sōmavāra.** In Bhāva, Vaiśākha śu. 1 corresponded to A.D. 1214 April 12 Saturday (not Monday). In the previous year, however, it began on **Monday = 22nd April 1213** at **.44.** The record belongs to the reign of the Hoysaḷa king **Vīra-Ballāḷadēva (II).** It registers a gift of land for the maintenance of a water-shed at **Muttage,** the chief place of **Muttage thirty,** a sub-division of **Kōgaḷi five-hundred,** by the Brāhman **Hariyaṇṇa** or **Harihara,** son of **Vishṇu-Nāyaka,** the *Ūroḍeya* of **Ammeḷe** and the *Heggaḍe* of Raṅgayya, after receiving it from **Boppaya-Bammaya,** the *Prabhu* of the village.

1 ಓಂ[॥*]ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಳೋಕ್ಯನಗ-
2 ರಾರಂಭಮೂಲಸ್ತಂಭಾಯ ಶಂಭವೇ ॥ ಸ್ವಸ್ತಿ ಶ್ರೀಜಯಶ್ಚಾಭ್ಯು-
3 [ದ]ಯಶ್ಚ ॥ ಸಕವರ್ಷ ೧೧೩೬ ನೆಯ ಭಾವಸಂವತ್ಸರದ ವೈಶಾಖ ಸುದ್ಧ-
4 ೧ ಸೋಮವಾರದಂದು ॥ ಕಂದ ॥ ವೀರದ ಬಲ್ಪಿಂ ನೆಗಳ್ದೀ ಧಾರಿಣಿಯೊ . .
5 ಜದೆ ತಾಳಿದ ವಿಜಯಶ್ರೀರಮಣನಮಳಕೀರ್ತ್ಯಾಧಾರಂ ಬಲ್ಲಾಳದೇವನೆ-
6 ಸದಂ ಧರೆಯೊಳೂ । ಅರಿನ್ರಿಪರಂ ಬೆಂಕೊಳ್ವಂ ಬಿರುದರ ಗಂ-
7 ಡಲೆವನ . . . . ಮಾರ್ಕೊಳ್ವಂ ಧುರದೊಳಿದಿರಿ . . . . ಸಂಹರಿಸುವ ಕಲಿ ನೆ-
8 ಗಳ್ದನಲ್ತೆ ಬಲ್ಲಾಳನ್ರಿಪಂ ॥ ಸ್ವಸ್ತಿ ಸಮಸ್ತಪ್ರಶಸ್ತಿಸಹಿತಂ ಯಾದವಕುಳಾಂ-
9 ಬರದ್ಯುಮಣಿ ಸ(ಂ)ಮ್ಯಕ್ತಚೂಡಾಮಣಿ ಮಲೆರಾಜರಾಜ ಮಲಪರೊಳು ಗಂ-
10 ಡ ಶನಿವಾರಸಿದ್ಧಿ ಗಿರಿದುರ್ಗ್ಗಮಲ್ಲ । ನಸಹಾಯಶೂರನೇಕಾಂಗವೀರ ನಿಸ್ಸಂ-
11 ಕಪ್ರತಾಪಚಕ್ರವರ್ತ್ತಿ ಹೊಯ್ಸಳ ವೀರಬಲ್ಲಾಳ[ದೇವರು] . . ಗುಂಡಿಯ ನೆಲೆವೀಡಿನೊ-
12 ಳು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥ ಕಂದ ॥ ವೊದವಿದ
13 ಕುಂತಳದೇಶಕ್ಕಿದು ಕಂನಡಿ . . . . ಪಾಂಡ್ಯವಿಷಯಂ ಸೊಗಯಿಪ್ಪು-
14 ದು ನಾಡೆ ಚೆಲುವಿನಿಂ . . . . . ಸಮಸ್ತ . . ಸಂಚಯದಿನೆತ್ತಂ ॥ ಕ ॥ ಅಂ-
15 ತಸೆವ ಪಾಂಡ್ಯವಿಷಯಕ್ಕಿಂತಿದು [ರಮಣೀ]ಮುಕುರಮಾಗಿ ಕೋಗಳಿಯಯ್ನೂ-
16 ಱಂತರ ಬಸಂತ . . . . . ನಿಸಿ ಸೊಗಯಿಸಿ ತೋರ್ಕ್ಕೂ ॥ ವ ॥
17 ಅಂತಸೆವ ಕೋಗಳಿಯಯ್ನೂ ಱದೊಳಗೆ ಮುತ್ತಗೆ ಮೂವತ್ತಕ್ಕಂ ಶಿರೋಮಣಿಯೆ-
18 ನಿಪ ಮುತ್ತಗೆಯ ಪ್ರಭುಗಳ ಗುಣಸ್ತುತಿಯೆಂತನೆ ಕಂದ ॥ ವಿಭವದೊಳೊ-
19 ರ್ಜ್ಜಿತತೇಜಪ್ರಭವದೊಳಾಶ್ರಿತ . . . . ರಕ್ಷಿಸುವಾ ಪ್ರಭುತೆಯೊ-
20 ಳು ದಾನಗುಣದೊಳು ಪ್ರಭು ಬೊಮ್ಮಯ್ಯಂಗೆ ಸಮನೆನಿಪ್ಪವನಾವಂ ॥ ಕಂ ॥
21 ಪೆರ್ಮ್ಮೆಗೆ ವಿನೂತಕೀರ್ತ್ತಿಗೆ ನಿರ್ಮ್ಮಳ . . . . ನೇಳ್ಗೆಗೌದಾರಕ್ಕಂ ನೂರ್ಮ್ಮಡಿ-
22 ಯೆನಿಪ ಮಹಾಪ್ರಭು ಭೊಮ್ಮಯ್ಯಂಗ . . . . ವಸುಧಾತಳದೊಳೂ ॥ ವಚ ॥
23 ಅಂತವರ್ಸ್ಸುಖದಿನಿರೆ ಪ್ರತಾಪಚಕ್ರವರ್ತ್ತಿ ಹೊಯ್ಸಳ ವೀರಬಲ್ಲಾಳದೇವರ ಶ್ರೀಪಾದಪ-
24 ದ್ಮೋಪಜೀವಿ ಮಹಾಪಸಾಯಿತಂ ಲೆಂಕ . . . ದಧಿಷ್ಟಾಯಕನಪ್ಪ ಸಾವಾಸಿ ರಂಗಯ್ಯ-
25 ನ ಹೆರ್ಗ್ಗಡೆಯಂಮ್ಮೆಳೆಯ ವೂರಡೆಯ ವಿಷು ನಾಯಕರ ಹರಿಯಣ್ಣನಾತನ ಗುಣಸ್ತು-

26 ತಿಯೆಂತನೆ ॥ ಈ ॥ ನುತವಿಪ್ರಾನ್ವಯತಿಳಕಂ ಪತಿಹಿತನತಿಕಯವಿನೂತಧರ್ಮ್ಮಪರಂ ಸೆ(ಂ)-
27 ನ್ನುತಮಂತ್ರಿ ಹರಿಹರಾಂಕಂ ಕ್ಷಿತಿಯೊಳು ಸಲೆ ನೆಗಳ್ದನೆಂದಡೇ ವಣ್ಣಿಪುದೋ ॥
28 ಅ(ಂ)ನ್ನು ನೆಗಳ್ದ ಹರಿಯಣ್ಣನು ಮುತ್ತಗೆಯ ಹೆಗ್ಗಡೆತನಂ ಮಾಡುವಲ್ಲಿಯೆಲ್ಲಿಯು ಪ್ರ-
29 ಭು ಬೊಪ್ಪಯ್ಯೊಬಮ್ಮಯ್ಯನ ಕೆಯ್ಯಲು ಧಾರಾಪೂರ್ವ್ವಕನಾಗಿ ಭೂಮಿಯೆನು ಹತೆ-
30 ದು ಅಱವಂಟುಗೆಯು ವುದೆಕದಾನಕ್ಕಂ . . . . . ನಿಕ್ಕಿ ಧರ್ಮ್ಮವಾಚಂದ್ರಾರ್ಕ್ಕತಾ-
31 ರಂಬರಂ ಸಲುವಂತಾಗಿಯೆಮಾಸೆಯಾದಿತ್ಯವಾರ ವ್ಯತೀಪಾತ ಸಂಕ್ರಮಾ-
32 ಣ ಸೂರ್ಯ್ಯಗ್ರಹಣದೆಲು ಬಿಟ್ಟ . . . . . ಳ್ಳಿಯದಾರಿಯಿಂ ತೆಂಕಲು ಮೂ-
33 ಡಣ ಮೇರೆಯೆರೆಯಬಾಗು ತೆಂಕಣಮೇರೆ . . . ಪಳ್ಳ ಪಡುವಣ ಮೇರೆ ದೊಡ್ಡಬದು-
34 ಹು ಬತಗಣಮೇರೆ ಯೀಶಾನ್ಯ . . . . . ಯಿಂತು ಚತುರಸ್ರ ಕೋಗ-
35 ಳಿಯೆ ಗಡಿಂಬದೆಲು ಮತ್ತರು ೧ ೞ ಈ ॥ ಮನವೊಸೆದು ಹರಿಹರಾಂಕಂ ವಿನು-
36 ತಯಶೋಮೂರ್ತ್ತಿಯುದೆಕದಾನಕ್ಕೆತ್ತಂ ಜನವಿನುತಮಾಗೆ ಭೂಮಿಯೆನೆನಸುಂ
37 ಚಂದ್ರಾರ್ಕ್ಕತಾರಮುಳ್ಳಂನೆವರಂ ॥ ಯಂತೀ ಧರ್ಮ್ಮವಂ ಪ್ರತಿಪಾಳಿಸಿದವರು ವಾ-
38 ರಣಾಸಿಯಲು ಸಹಸ್ರಧೇನುವನು ಸಬ್ರಾಹ್ಮಣರಿಗೆಯಲಂಕಾರಸಹಿತ ಕೊ-
39 ಟ್ಟ ಫಲ ಯೀ ಧರ್ಮ್ಮಮನಸಹರಿಸಿದವೆರು ಗಂಗೆಯ ತಡಿಯೆಲು ಗೋವು ಬ್ರಾಹ್ಮರ-
40 ನು ಸ್ವಹಸ್ತದೆಲು ವಧಿಸಿದ ಪಾಪ ॥ ಶ್ಲೋ ॥ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂ-
41 ಧರಾಂ ಷಷ್ಟಿವರ್ವ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿ[ಃ*] ॥ ಮಂಗಳ ಮಹಾಶ್ರೀ[ ॥*]

## No. 333.

(*A.R. No.* 126 *of* 1913.)

ON A SLAB SET UP IN THE VENUGOPALASVAMI TEMPLE AT MAGALA, HADAGALLI TALUK, SAME DISTRICT.

The record is dated **Śaka 1136, Bhāva, Chaitra, śu. 11, Bṛihaspativāra.** The late Mr. Swamikannu Pillai has remarked on this date as follows :—" = A.D. 1215 Thursday March 2 ; . 48. *N.B.* A.D. 1214–15 was Bhāva and Śaka 1136 but the Chaitra here referred to is Chaitra at the end not Chaitra at the beginning of the year (*vide* section I11 of Indian Chronology) ". But it may be noted that it was not a day of Saṅkramaṇa. The inscription refers itself to the reign of the Hoysaḷa king **Vishṇuvardhana Vīra-Ballāḷa (II).** The *Ūroḍeyas* **Harihara** and **Gōvinda,** two learned Brāhmans, are stated to have consecrated the image of Śrī-Gōpāla and, with the *Mahājanas* of **Māṇgoḷa,** made grants of land and houses for conducting the worship of the god. The genealogy of Harihara and Gōvinda is given and the Brāhman general and minister of the king named **Mādhava** is praised as a great warrior.

1 ಸ್ವಸ್ತಿ ಶ್ರೀಜಯಾಭ್ಯುದಯೆಶ್ಚ ॥ ನಮಸ್ತಸ್ಮೈ ವರಾಹಾಯ ಲೀಲೆಯೋದ್ಧರತೇ ಮಹೀಂ । ಖುರಮಧ್ಯ-
ಗತೋ ಯಸ್ಯ ಮೇರುಃ
2 ಖಣಖಣಾಯತೇ ॥ ಧಾತಾ ಯಸ್ಯ ತನೂಭವೆಸ್ಸುರಸರಿದ್ಯೋತ್ಪಾದಜಾ ಪಾವನೀ ಯದ್ದಂಷ್ಟ್ರಾಗ್ರ ದ್ಯುತಾ
ಪುರಾ ಪರಹಿತಾ ಕೋಗ್ರ-
3 ಡಸ್ಯ ವಿಶ್ವಂಭರಾ ಸರ್ವ್ವಾಸಾಂ ಸದನೇ ವಸತ್ಯನುದಿನಂ ಗೋಪ್ಯಾಂ ಯ ಏಕೋಪಿ ಸಃ ಶ್ರೀಗೋಪಾಳ-
ಮಹಾವಿಭುರ್ದ್ದನುಜಜಿತ್ಕಕ್ರೀಕ್ಷ್ವ-
4 ರಃ ಪಾತು ವಃ ॥ ಶ್ರೀಕಾಂತೋರಸ್ಥಳಾಲಿಂಗಿತಭುಜಯುಗಶಾಖಾಕರಾಗ್ರಪ್ರವಾಳಪ್ರಾಕಾರೋದ್ಯಾಸಿ
ಬಾಸ್ವದ್ರತ್ನ-
5 ಖಚಿತಕರ್ಣಾವತಂಸಂ ಸುಪುಷ್ಪಾನೀಕಂ ದಾತೃತ್ವಸತ್ವಂ ಫಳಮಗಣಿತಗೋಪಾಳಕಳ್ಪದ್ರುಮಂ ತ್ರೈಲೋ-
ಕ್ಯಕಾಧಾರನಿ(ಂ)ನ್ನೂಬ್ಬ್ರ
6 ರಿಗಭಿಮತಮಂ ಮಾಳ್ಕತಿಪ್ರೀತಿಯಿಂದಂ ॥ ಕತಮೆ(ಂ)ನ್ಯಸ್ತು ತನಬ್ಜನಾಭನಖಿಳಶ್ರೀಗೋಪಕನ್ಯಾವರಾ-
ವೃತವೈಂದಾವನಮ-
7 ಧ್ಯಗೋಪನಿವೇಹಪ್ರೋದ್ಯಾಸಿಹೇಮಾಂಬರೋ(ಂ)ನ್ನತಸೊತ್ಯಂ ಕಟಿಯೊಳ್ಪುದಳ್ದಿಸೆಯಲುದ್ಯೋ(ಂ)-
ನ್ವೀಣುನಾದೆಂಗಳಿಂ ಕೃತಿಯೆಂ ಬಾಜಿ-

8 ಪ ಗೋಪಿನಾಥನೊಲ್ದೀಗಿಷ್ಟಾರ್ತ್ಥಸಂಸಿದ್ಧಿಯಂ ॥ ಗದ್ಯ ॥ ಅನ್ತೀ ಪರಮೇಶ್ವರಂ ಸಮಸ್ತಧರ್ಮ್ಮಪರಿ-
ತ್ರಾಣಾರ್ತ್ಥ್ಯಕವರಾಹದೇಹೋದ್ಧೃತರು-

9 ಚಿರವಸುಮತಿಕಾನ್ತಾನಿತಂಬಪ್ರದೇಶಭೂಷಣಾಯಮಾನಕನಕವಸನರತ್ನಖಚಿತಕಟಿಸೂತ್ರದಂತಸೆವ ಸ-
ಮುದ್ರದ ಮ-

10 ಹಿಮೆಯೆ(ಂ)ನ್ತೆಂದಡೆ ॥ ವ್ರಿತ್ತ ॥ ಗಂಭೀರಸ್ಫಾರವೇಳಾಬಹಳಪರಿವೃಢಲ್ಲೋಲಕಲ್ಲೋಳಮಾಳಾರಂಭ-
ಪ್ರೋಡ್ಡೀನಫೇನಪ್ರಬಳಜಳಚರ-

11 ಲ್ಲೋಠಪಾಠೀನಕುಂಭತ್ಕುಂಭೀರಾಭೀಳನಕ್ರಪ್ರಕರಕಮಠನೀರೇಭರತ್ನಪ್ರಭಾವೋಜೃಂಭಪ್ರೋದ್ಭಾಸಿ-
ವೀಚೀನಿಚಯಘನಘನಧ್ವಾನ-

12 ರೌದ್ರಂ ಸಮುದ್ರಂ ॥ ವ ॥ ಆ ಸಮುದ್ರಮುದ್ರಿತಮಪ್ಪ ಜಂಬೂದ್ವೀಪಮಧ್ಯವರ್ತ್ತಿ ಮೇರುವಿಂ ದಕ್ಷಿಣ-
ದಿಗ್ಭಾಗದೊಳು ॥ ವ್ರಿ ॥

13 ವಿಳಸದ್ಭಾರತವರ್ಷವಂತದಱೊಳುದ್ಯದ್ದಕ್ಷಿಣಾಶಾಮಹೀವಳಯಂ ಕುನ್ತಳದೇಶವಲ್ಲಿ ಚೆಲ್ವಂ ತಾಳ್ದಿರ್ದ್ದ
ಪುಂಡ್ರೇಕ್ಷುವಿಂ ಕಳಮಶ್ರೇಣಿಗಳಿಂ

14 ವನೋಪವನದಿಂ ತದ್ರಾಜಹಂಸಂಗಳಿಂ ಸಲೆ ರಂಜಿಪ್ಪ ನೊಣಂಬವಾಡಿ ಯೆಸೆಗುಂ ವಿಶ್ವಂಭರಾಭಾಗದೊಳು ॥
ಅನ್ತಾ ನೊಣಂಬವಾಡಿಯನಾ-

15 ಳುವ ದಕ್ಷಿಣಚಕ್ರವರ್ತ್ತಿ ವಿಷ್ಣುವರ್ದ್ಧನವೀರಬಲ್ಲಾಳುದೇವನನ್ವಯಮೆಂತೆ[ಂ]ದಡೆ ॥ ಕಂ ॥ ವಿಳಸ-
ದ್ವಿಶಿಷ್ಟಹೃದ್ಭ್ಯಾಕುಳದ ತಮಂ

16 ಪರೆಯೆ ಹೊಯ್ಸಣಾನ್ವಯಭೂಭೃತ್ಕುಳದಿಂದಮೊಗೆದು ನಿಜಭುಜಬಲವೆ ಜಗಚ್ಚಕ್ಷುವೆನಿಪ ವಿನೆಯಾ-
ದಿತ್ಯಂ ॥ ಗದ್ಯ ॥

17 ತತ್ಪುತ್ರೋಹ್ಯೆಱೆಯಂಗನೃಪಸ್ತಸ್ಯಾಗ್ರಮಹಿಷೀ ನಿಖಿಳಸೌಭಾಗ್ಯನಿಳಯಾ ಏಚಲದೇವೀ ತಯೋಃ
ಪುತ್ರಾಃ ಉದಯಾ-

18 ದಿತ್ಯಬಲ್ಲಾಳವಿಷ್ಣುವರ್ದ್ಧನ ನಾಮಾನಃ ತೇಷಾಂ ಮಧ್ಯೇ ನಿಖಿಳರಾಜ್ಯವಿಭವಸ್ಯವಿಷ್ಣುವರ್ದ್ಧನನಾಮ-
ಮಹಾರಾಜಸ್ಯ ಮಹಾಲಕ್ಷ್ಮೀ ರಾಜ್ಞೀ ।

19 ತತ್ತನೂಜೋ ನರಸಿಂಹದೇವಮಹಾನೃಪ ಆಸೀತ್ । ತದಗ್ರಮಹಿಷೀ ಶ್ರೀಮದೇಚಲದೇವೀತಿ ವಿಖ್ಯಾತಾ ।
ತತಸ್ತಸ್ಯಾ-

20 ಮಾವಿರಾಸೀದ್ವೀರಬಲ್ಲಾಳಪೃಥ್ವೀಪತಿಃ ॥ ವ್ರಿ ॥ ಮಾಳವಕಾಲರೂಪ ಮಗಧೇಶ್ವರಪಂನೆಗವೈನತೇಯ
ಪಾಂಚಾಳಪ-

21 ಯೋಧಿಬಾಡವ ತುರಃಕಧರಾಧರವಜ್ರದಂಡ ನೇಪಾಳಮನೋಜಕಾಳಗಳ ಗುರ್ಜ್ಜರವೈರೀಭಸಿಂಹ
ವೀರಬಲ್ಲಾಳ-

22 ನೃಪಾಳ ನಿ(ಂ)ನ್ನ ಸಮನಾರ್ಭ್ಭುವನಾಧಿಪರೀ ಧರಿತ್ರಿಯೊಳು ॥ ಸ್ವಸ್ತಿ ಸಮಸ್ತಭುವನಾಶ್ರಯಂ
ಶ್ರೀಪೃಥ್ವೀವಲ್ಲಭಂ

23 ಮಹಾರಾಜಾಧಿರಾಜ ಪರಮೇಶ್ವರಂ । ದ್ವಾರಾವತೀಪುರವರಾಧೀಶ್ವರಂ । ಯಾದವಕುಳಾಂಬರದ್ಯುಮಣಿ ।
ಸ(ಂ)ಮ್ಯ-

24 ಕ್ತಚೂಡಾಮಣಿ ಮಲೆರಾಜರಾಜ । ಮಲಪರೊಳ್ಗಂಡ । ಕದನಪ್ರಚಂಡನೇಕಾಂಗವೀರ । ನಸಹಾಯಶೌ-
ರ್ಯ್ಯ । ಶನಿ-

25 ವಾರಸಿದ್ಧಿ ಗಿರಿದುರ್ಗ್ಗಮಲ್ಲ ಚಲದಂಕರಾಮ ನಿಶ್ಶಂಕಪ್ರತಾಪಚಕ್ರವರ್ತ್ತಿ ಹೊಯ್ಸಣ ವಿಷ್ಣುವರ್ದ್ಧನ-
ವೀರಬಲ್ಲಾಳದೇವ-

26 ನು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥ ತತ್ಪಾದಪದ್ಮೋಪಜೀವಿ ॥ ವ್ರಿ ॥ ಕುಸುಮ-
ಶರಂಗೆ ತಾನಧಿಕನರ್ಕ್ಕ-

27 ಜನಿಂದ ವಿಶೇಷವಾರ್ಪ್ಪಿನೊಳ್ ಶ್ವಸನತನೂಜನಿಂ ಮಿಗಿಲು ರೂಪಿನೊಳೀವ ಗುಣಪ್ರಭಾವದೊಳ್ಮಿಸುಪ
ಭುಜಪ್ರತಾಪದೊಳು ಪೇ-

28 ಳಮೃತೇಶಪದಾಬ್ಜಭೃಂಗನೀ ಮಸಣೆಯದಂಡನಾಥನವೊಲಾರ್ದ್ದೊರೆ ಮಂತ್ರಿಗಳೀ ಧರಿತ್ರಿಯೊಳು ॥
ವಂದಿಬ್ರಾತವಿಶಿಷ್ಟದಾನಭು-

29 ವನಪ್ರಬ್ಯಕ್ತಕಳ್ಪದೃಮಃ ಸೌಖ್ಯೇ ಭಾತಿ ಶಶಾಂಕನಿರ್ಮ್ಮಳತರಃ ಪ್ರತ್ಯಕ್ಷಲಕ್ಷ್ಮೀಪತಿಃ ಸೋಯಂ ವೈ-
ರಿನಿಕಾಯಖಂಡನಮಹ-

30 ದ್ವೀರ್ದಂಡಯುಗ್ಮಾ(ಂ)ನ್ವಿತೋ ಜೀಬ್ಯಾನ್ಮಾಧವನಾಯಕ[1*] ಸ್ಥಿರತರಂ ಯಾವದ್ರವಿರ್ವರ್ತ್ತತೇ
॥ -ಂ- ॥ ಸ್ವಸ್ತಿ ಯಮನಿಯಮಸ್ವಾಧ್ಯಾಯೆಧ್ಯಾನ-

31 ಧಾರಣಮೌನಾನುಷ್ಠಾನಜಪಸಮಾಧಿಶೀಲಗುಣಸಂಪನ್ನ ರೋಪಾಸನಾಗ್ನಿಹೋತ್ರದ್ವಿಜಗುರುದೇವತಾಪೂ-
ಜಾತತ್ಪರರುಂ । ಮಾ-

32 ರ್ತ್ತಂಡೋಜ್ವಳಕೀರ್ತ್ತಿಯುತರುಂ । ಶ್ರೀಮನ್ನರಸಿಂಹದೇವರ ದಿಬ್ಯಶ್ರೀಪಾದಪದ್ಮಾರಾಧಕರುಮೆಪ್ಪ ಶ್ರೀ-
ಮತ್ಪರ್ವ್ವನಮಕ್ಕದೆನಾದಿಯ-

33 ಗ್ರಹಾರಂ ಮಾಂಗೊಳದೂರಡೆಯಪ್ರಮುಖನೆಶೇಷಮಹಾಜನಂಗಳ ಪ್ರಿಯಪುತ್ರರಪ್ಪೂರಡೆಯಸಂತಾನ
ವಿಸ್ತರಿಸಾದೆ ಹ-

34 ರಿಹರದೇವನೆನ್ನಯಮೆಂತೆಂದಡೆ ॥ ವಿ ॥ ವಸುಮತಿಯೆಂಬ ಕಾಂತೆಯ ಪಯೋಧರಮೌಕ್ತಿಕಹಾರದನ್ತೆ
ಕಣ್ಗೆಸವ ಮಹಾಗ್ರಹಾರ-

35 ಮೆನಿಪಿಟ್ಟಗೆಯೊಳ್ವರೆಕಶ್ಯಪಾನ್ವಯಂ ಪಸರಿಸೆ ಪು(ಂ)ಣ್ಯಮೂರ್ತ್ತಿ ವಿರುಪಾಕ್ಷನ ಸಾಧ್ವಿ ಪತಿಬ್ರತಾಮ-
ದಾಲಸೆಯೆರಸೌವ್ವೆಗುತ್ಸವೆ-

36 ದೆ ಪುಟ್ಟಿದೆ ಸೋಮನಿಳಾತಳಾಗ್ರದೊಳು। ಆ ವಿಪ್ರೊತ್ತಮ ಸೋಮನಾಥನ ಕುಲಸ್ತ್ರೀರತ್ನ ಸಾವಿತ್ರೆ-
ಯಪ್ಪೀ ವಿಖ್ಯಾತೆಯ ನನ್ದನರ್ಹ-

37 ರಿಹರಂ ತಾನಗ್ರಜಂ ವಿಶ್ವೇದ್ಯಾವಿಸ್ತಾರನುದಾರನಾತನನುಜಂ ಗೋವಿಂದನೊಲ್ದರ್ತ್ಥಿಯಿಂದೀವೆಂ ಶಿಷ್ಯ-
ಜನಕ್ಕಭೀಷ್ಟಫಳಮೆಂ ಲೋಕ್ಯೈಕಕ-

38 ಳ್ಪದೈಮಂ ॥ ಕ ॥ ಹರಿಹರನ ವನಿತೆ ಲಕ್ಷ್ಮಿಗೆ ದೊರೆಯೆನಿಸುವ ರೇಕೆಯೆಕ್ಕನೊಳ್ಪಿನಿಯಿಸಿದರ್ದ್ಧರೆಯೊ-
ಳಗೆ ವಿಷ್ಣುಸೋಮಂ

39 ವರಚಾವುಂಡಾಖ್ಯೆ ನೃಹರಿಯೆನಿಪ ತನೂಜಗು ॥ ಆತನೊಡವುಟ್ಟಿದಂ ಮನುನೀತಿಲಸನ್ಮಾರ್ಗನೆನಿಪ
ಗೋವಿಂದನ ಸತ್ವಿ )ತಿಯ ಸತಿ

40 ಚಾಮೆವ್ವೆಗೆ ಜಾತಂ ಧರೆಯೊಳಗೆ ಹರಿಹರಾಖ್ಯತನೂಜಂ -ಂ- ಸ್ವಸ್ತಿ ಶ್ರೀಮತ್ಶಕವರ್ಷದ ಇಂತಿಷ್ಟನೆಯ
ಭಾವಸಂವತ್ಸರದ ಚೈತ್ರ ಶುದ್ಧ ವಿಕಾ-

41 ದೆ ಬೃಹಸ್ಪತಿವಾರ ಸಂಕ್ರಮಣ ವ್ಯತೀಪಾತದಂದು ಊರಡೆಯ ಸಂತಾನ ಹರಿಯಣ್ಣಗೋವಿಂದದೇವನ-
ವರ ಭಾವ ವಿರುಸಯ್ಯನಿನ್ತಿನಿಬರುಂ

42 ಶ್ರೀಮದಗ್ರಹಾರಂ ಮಾಗೊಳದೆ ಗ್ರಾಮಮೆಧ್ಯದಲ್ಲಿ ಶ್ರೀಗೋಪಾಳದೇವರ ಪ್ರತಿಷ್ಠೆಯ ಮಾಡಿ ಊರಡೆ-
ಯಪ್ರಮುಖಶ್ರೀಮದಶೇಷಮ-

43 ಹಾಜನವಿನೂಬ್ರ್ಬಸತ್ವಾಮಿಗಳ ಶ್ರೀಪಾದಪದ್ಮಗಳಿಗೆ ಸುವರ್ಣ್ಣಪುಷ್ಪದಿಂದಾರಾಧಿಸಿ ನಮಸ್ಕಾರಂ ಮಾ-
ಡಲಾ ಮಹಾಜನಂಗಳು ರಾಜಾಧ್ಯಕ್ಷಸಹಿ-

44 ತವಾ ದೇವರ ರಂಗಭೋಗನೈವೇದ್ಯನಂದಾದೀವಿಗೆಚೈತ್ರಪವಿತ್ರಸ್ಫುಟಿತಖಣ್ಡಿತಜೀರ್ಣೊದ್ಧಾರಕ್ಕಂ
ಸರ್ಬ್ಬಬಾಧಪರಿಹಾರವಾಗಿ ಊರಡೆಯ-

45 ರ ಶ್ರೀಮಾನ್ಯದೊಳಗೆ ಬಿಟ್ಟ ಭೂಮಿ ಹಿರಿಯೂರಡೆಯರ ಮೊದಲಹಸುಗೆ ಕೊಡೆಯಾಲದಲ್ಲಿ ಮಾನಿಯೊ-
ಳಗೆ ಕೆಂಗಾಡು ಮತ್ತರೊಂಭತ್ತು ।

46 ಮೆಂನೆಯೆಗೆಜೆಯ ಕೆಳಗೆ ಹಿರಿಯೂರಡೆಯರ ತೋಟಗಟ್ಟು ಮತ್ತರೆರಡು ದೇವಿಂಗೆಱೆಯೊಳಗೆ ನಡುವ-
ಣೂರಡೆಯರ ಮಾಹಿಕೂಚಿಣ್ಣಂ-

47 ಗಳ ಎರೆಮತ್ತರೈದು ಅಲ್ಲಿ ಕೆಱೆಯೆಮೊದಲ ತಂಡಗದಿಕೂಚಿಣಂಗಳ ಸ್ಥಳ ಮತ್ತರೆರಡು ಅಲ್ಲಿ ಬ್ರಹ್ಮ-
ದೇವಪಟ್ಟವರ್ದ್ಧನರ ಸ್ಥಳ ಮತ್ತರೆರಡು ।

48 1ಕೆಱೆಯ ಮೊದಲ

49 ಚಂದ್ರಮಂಚಿಯೆಣ್ಣಂಗಳ ಮಗ ಗುಂಡದೇವಪೆದ್ದಿ ಬನ್ನಿಯ ಬೆನಕನಲ್ಲಿ ಶ್ರೀಧರದೇವರ ಕೆಯ್ಯಿಂ ಬಡಗ
ನಾಕಱಹಸುಗೆಯಲು ಕೊಟ್ಟ ಮತ್ತರು ನಾಲ್ಕು

50 ಗೂಳಿಗನ ಕಟ್ಟೆಯೆಲ್ಲಿ ಮಹಾಜನಂಗಳ ಕೈಯ್ಯೆಲು ಧಾರೆಗೊಂಡ ಕೆಯಿ ಮತ್ತರು ಮೂಱು । ಊರಡೆ-
ವಾಳ ಮೊದಲಹಸುಗೆ ಱುಂ-

51 ಡಿಗೆ ಮತ್ತರು ನಾಲ್ಕು । ಊರಡೆಗೇರಿಯೊಳಗೆ ಬಾವಿಯಿಂ ಪಡುವೆ ಬ್ರಹ್ಮದೇವಪಟ್ಟವರ್ದ್ಧನರು ಕೊಟ್ಟ
ತೆಂಕವಾಗಿಲ ಮನೆಯೊಂದು ಊರಡೆದ-

52 ಡದೆ ಬಡಗಣ ಮೂಡಣ ಗೋಟಿನಲ್ಲಿ ಬ್ರಹ್ಮದೇವಪಟ್ಟವರ್ದ್ಧನರು ಕೊಟ್ಟ ತೆಂಕವಾಗಿಲ ತುಡುಕೆ-
ಯೊಂದು ॥ ಇನ್ತೀ ಧರ್ಮ್ಮಮನಿನ್ನೂರ್ವ್ವರುಂ ಪ್ರತಿ-

---

[1] Some space is left blank at the beginning of this line.

53 ಪೂಳಿಸುವರು ॥ ಈ ಧರ್ಮ್ಮಮಂ ಪ್ರತಿಪೂಳಿಸಿದವರು ಅಮಾವಾಸ್ಯೆ ಸೋಮವಾರ ಸೂರ್ಯ್ಯಗ್ರಹಣ
ವ್ಯತೀಪಾತ ಸಂಕ್ರಮಣವಿನ್ತೀ ಮಹಾತಿ-

54 ಥಿಯಂದು ನೂವಿರ ಕವಿಲೆಗಳ ಕೋಡುಂ ಕೊಳಗಿನಲು ಸುವರ್ಣ್ಣದಿಂ ಕಟ್ಟಿಸಿ ವೇದಪಾರಗತರಪ್ಪ ಸಹಸ್ರ-
ಬ್ರಾಹ್ಮಣರಿಗೆ ವಾರಣಾಶಿಕುರುಕ್ಷೇತ್ರ-

55 ದಲು ದಾನಮಂ ಕೊಟ್ಟ ಫಲಮಕ್ಕು ॥ ಇನ್ತೀ ಧರ್ಮ್ಮ(ಂ)ಮನಳಿದವರಾ ತಿಥಿಯಲಾ ಕವಿಲೆಗಳನಾ ಬ್ರಾ-
ಹ್ಮಣರುವನಾ ಕ್ಷೇತ್ರದಲು ಸ್ವಹಸ್ತದಿಂ ಕೊಂದೆ ಮ-

56 ಹಾಪಾತಕನಕ್ಕು ॥ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾ[ಂ*] ಷಷ್ಟಿವರ್ಷಸಹಸ್ರಾಣಿ
ವಿಷ್ಠಾಯಾಂ ಜಾಯತೇ ಕೃಮಿ[ಃ*] ॥ ಮಂಗಳ ಮಹಾಶ್ರೀ ಶ್ರೀ

## No. 334.

(*A.R. No.* 68-*A of* 1904).

ON A SLAB LYING ON THE RIGHT SIDE OF THE ENTRANCE OF THE CENTRAL SHRINE OF THE BENAKAPPA TEMPLE AT ORUVAY, BELLARY TALUK, SAME DISTRICT.

This is dated the cyclic year **Īśvara, Śrāvaṇa, ba. 30, Śukravāra, Sūrya-grahaṇa,** corresponding to **A.D. 1217, August 4 Friday,** with a solar eclipse. It belongs to the reign of the Hoysaḷa king **Vīra-Ballāḷa (II).** *Raṇadhavala* **Basavaṇa-Daṇḍanāyaka,** who is described as the rescuer of Ballāḷa's suzerainty, is stated to have granted some land for the service of the god Vināyaka. **Echaseṭṭi** is stated to have granted the Vināyaka-sthāna to **Chīlarāśi-guru,** the disciple of **Bhīmarāśi-guru**; the *sthala* of **Kaṁpile** and the four *Nāḍus* made a gift of tolls on bullocks to Echaseṭṭi.

1 ಸ್ವಸ್ತಿ [॥*] ಶ್ರೀಮತು ಯಾದವನಾರಾಯಣಂ ಪ್ರತಾಪಚ-
2 ಕ್ರವರ್ತ್ತಿ ಹೊಯ್ಸಳ ವೀರಬಲ್ಲಾಳದೇವರಾಜ್ಯಸಮು-
3 ದ್ಧರ ಬಸವಣದಂಡನಾಯಕಗುಣಪ್ರಭಾವವೆಂತೆಂದೆ-
4 ಡೆ ॥ ನುಡಿವೆಂ ಸತ್ಯವಚೋಕ್ತಿಯಂ ಸಕಳಧರ್ಮ್ಮಬ್ಯಾ-
5 ಪ್ತಿಯಿಂದೆರ್ತ್ಥಮಂ ಪಡೆವ ವಿಪ್ರಸುರಾದಿಶಿಷ್ಟಜನ-
6 ತಾಸಂತುಷ್ಟಿಯಾಗಲ್ಕೆ ತಾ ಕುಡುವೆಂ ದ್ರವ್ಯವನೀ ಗು-
7 ಣಾಕ್ರಯವೆಮುವೆಂ ಲೋಕಂ ಬಬಾಪ್ಪೆಂಬಿನಂ ಪಡೆದೆಂ ಸದ್ಗುಣಿ
8 ದಂಡನಾಥೆ ಬಸವೆಂ ಪ್ರಖ್ಯಾತಿಯಂ ಕೀರ್ತ್ತಿಯಂ ॥ ಕಳಿಯೆಮೈತೆದಂಡ-
9 ನಾಥೆರ ಲಲಿತಾತ್ಮಜನೆಂಮೊಡೊಪ್ಪುಗುಂ ಕಳಿತನಮುಂ ಸಲೆ ಸತ್ಯಾ-
10 ಮೃತವಾಕ್ಯಂ ಕುಲತಿಳಕಂ ಬಸವದಂಡನಾಥಾಧಿಪನೊಳ್ ॥ ಶ್ರೀಮ-
11 ದೀಶ್ವರಸಂವತ್ಸರದೆ ಶ್ರಾವಣ ಬಹುಳ ಅಮಾವಾಸ್ಯೆ ಶುಕ್ರವಾ-
12 ರ ಸೂರ್ಯ್ಯಗ್ರಹಣದಂದು ಶ್ರೀವಿನಾಯಕದೇವಗರ್ಪ್ಪಣ ರಣಧೆ-
13 ಪಳಿ ಬಸವಚಮೂಪಂ ಧಾರಾಪೂರ್ಬ್ಬಕಂ ಮಾಡಿ ಕೊಟ್ಟ ಕೆಯಿ ತಂ-
14 ಕವ್ವೊಲದೆಲ್ಲಿ ಚಿಕ್ಕಡ್ಡದಾರಿಯಿಂ ಬಡಗಲಿಬ್ಬಡಗಲಾಗಿ ಹಿರಿ-
15 ಯಕೋಲ ಮೆ ೦। ಇಂತನಿತು ಹಿರಿಯೆಕೋಲ ಮೆತ್ತರು ಗಳಿಊರ
16 ಪಿಂತಣ ತೋಟ ೧ ಇಂತೀ ವಿನಾಯಕದೇವಸ್ಥಾನಮಂ ಭೀಮರಾಶಿಗು-
17 ರುಗಳ ದೀಕ್ಷೆಯ ಮಗಂ ಚೀಲರಾಶಿಗುರುಗೆಳ್ಗೆ ದೇವಬ್ರಾಹ್ಮಣ-
18 ಪಾದಾರಾಧಕನಪ್ಪ ಬಲಿಯೇಚಸೆಟ್ಟಿ ಧಾರಾಪೂರ್ಬ್ಬಕಂ ಮಾಡಿ ಚೀಲರಾ-
19 ಶಿಗೆ ಕೊಟ್ಟನು ಕುಱುಗೋಡ ಕಂಪಿಲೆಯ ಸ್ಥಳವುಂ ನಾಲ್ಕುನಾಡುಂ ಎತ್ತ-
20 ನಶಾಸನವಂ ವಿಜಸೆಟ್ಟಿಗೆ ಮಾನ್ಯಂ ಮಾಡಿ ಕೊಟ್ಟರು ॥ ಸ್ವದತ್ತಾಂ ಪ-
21 ರದತ್ತಾಂ ವಾ ಯೋ ಹರೇತಿ ವಸುಂಧರಾಂ ॥ ಷಷ್ಟಿವ್ವರ್ಷಸಹ-
22 ಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿ[ಃ*] ॥

## No. 335.

(*A.R. No.* 743 *of* 1922).

ON A PILLAR IN THE MANDAPA OF THE RUINED SIVA TEMPLE ON THE BANK OF THE NARIHALLA AT TALURU, HOSPET TALUK, SAME DISTRICT.

This is dated **Bahudhānya, Jyēshṭha, ba. 15, Ādivāra** corresponding to **A.D. 1218 June 4, Sunday,** in the reign of the Hoysaḷa king **Vīra-Ballāḷa (II).** The *Mahānāḷprabhu* **Bomma-Gavuḍa** of **Yaguvaṭṭi** made a gift of land to **Bommōja** for constructing the Iśvara temple of **Talara.**

1 ಸ್ವಸ್ತಿ [।*] ಶ್ರೀಮತು ಯಾದವನಾರ-
2 ಯಣ ಪ್ರತಾಪಚಕ್ರವರ್ತ್ತಿ ಹೊಇಸಣ
3 ವೀರಬಲ್ಲಾಳರಾಜ್ಯದ ಬಹುಧಾನ್ಯಸಂವ-
4 ಚರದ ಜ್ಯೇಷ್ಠ ಬ ೧೫ ಶ್ರೀಮನುಮ-
5 ಹಾನಾಳುಪ್ರಬು ಯೆಗುವಟ್ಟಿಯೆ ಬೊ-
6 ಮ್ಮಗವುಡನು ತಲರದಾ ಇಸ್ವರದೇವರ (ದೇ-
7 ವರ) ದೇವಾಲ್ಯವಂ ಮಾಡಿದೆ ಬೊಮ್ಮೋಜಂ-
8 ಗೆ ಬೊಮ್ಮಗವುಡನು ಕೊಟ್ಟನು ದೇವಾಲ್ಯದೆ
9 ರಥವೆಣಮು[ಂ] ಮೂಲಿಗಕೆಯ್ಯೆ
10 ಒಳಗಣಕೆಯನು ಕೊಟ್ಟನು ಚಂದಾ-
11 ಕ್ಕರ್ತಾರಂಭರಂ ॥ ಮೆ

## No. 336.

(*A.R. No.* 52 *of* 1904).

ON A SLAB SET UP IN FRONT OF THE BOLU-BASAVA TEMPLE AT KUDATINI, BELLARY TALUK, SAME DISTRICT.

This is dated **Śaka 1140, Bahudhānya, Kārtika, puṇṇami, Bṛihaspativāra, Sōmagrahaṇa.** In Bahudhānya = Śaka 1140 (expired) Kārttika śu. 15 corresponded to A.D. 1218 November 4, Sunday (not Thursday) ; but in the next year *i.e.*, Pramāthi, Kārtika Puṇṇame did fall on **Thursday = 24 October A.D. 1219.** Even on that day there was no eclipse. The record belongs to the reign of the Hoysaḷa king **Vīra-Ballāḷa (II).** When **Udayākaradēva-Brahmachāriyarasa,** the five *vargas* of the *sthāna* of **Koṭṭitoṇe,** the ascetics of the five *maṭhas* and numberless *gaṇas* had assembled, the sixty families of the oil-makers set up the god Telligēśvara and made a gift of the cess levied on every sale and purchase, for the service of the god. The gift was made after washing the feet of **Kalyāṇaśakti,** a Śaiva teacher in charge of the institution.

1 ಸ್ವಸ್ತಿ ಶ್ರೀಜಯಾಭ್ಯುದೆಯೆಚ್ಚ ॥ ನಮಸ್ತುಂಗಶಿರಶ್ಚುಂಬಿಚ-
2 ಂದ್ರಚಾಮರಚಾರವೇ ತ್ರೈಳೋಕ್ಯನಗರಾರಂಭಮೂಲ-
3 ಸ್ತಂಭಾಯ ಕಂಭವೇ ॥ ನಮಃ ಸ್ವಾಮಿಕುಮಾರಾಯ ದೈವ್ಯತ್ತಾ-
4 ರಕವಿದ್ವಿಷೇ ಅಧಷಕೃತಮಯೂರಾಯ [ಬಾಣಾ]ದ್ಯೌಧಿಕಕೆತ್ತಯೇ ॥
5 ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿ-
6 ರಾಜ ಪರಮೇಶ್ವರಂ ಪರಮಭಟ್ಟಾರಕಂ ಯಾದವಕುಳಾಂಬರ-
7 ದ್ಯುಮಣಿ ಸ(ಂ)ಮ್ಯಕ್ತ್ತಚೂಡಾಮಣಿ ಮಲೆರಾಜರಾಜ ಮಲಪರೊಳುಗಣ್ಡಕ-
8 ದನಪ್ರಚಣ್ಡ ಸನಿವಾರಸಿದ್ಧಿ ಗಿರಿದುರ್ಗಮಲ್ಲ ನಿಸ್ಸಂಕಪ್ರತಾಪ ಹೊಯ್ಸ-
9 ಣರಾಯ ವೀರಬಲ್ಲಾಳದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರ-
10 ದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂ ಸಲಲು ದೋರಸಮುದ್ರ-
11 ದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರೆ
12 ಸ್ವಸ್ತಿ ಸಮಧಿಗತಪಂಚಮಹಾಶಬ್ದ ಬ್ರತಜಪನಿಯಮಮಹೋಮ-

13 ಸಂಯುಕ್ತರುಂ ಶ್ರೀಸ್ವಾಮಿಕಾರ್ತಿಕೇಯದೇವತಪೋವನಾಧಿಪತಿಗಳ್ಕಪ್ಪ
14 ಶ್ರೀಮದ್ದಂಡಾಸನಿ ಲೋಹಾಸನಿ ಉದೆಯಾಕರದೇವಬ್ರಹ್ಮ-
15 ಚಾರಿಯರಸರು ಮುಖ್ಯವಾಗಿ ಕೊಟ್ಟ್ಯಲೊಣೆಯ ಸ್ಥಾನದಯ್ದುಂ
16 ವರ್ಗ್ಗಂಗಳುಂ ।। ಪಂಚಮೆಯಸ್ಥಾನದ ತಪೋಧನರುಂ । ಅಸಂ-
17 ಖ್ಯಾತಗಣಗಳುಂ ಮಹಾಸಭೆಯಾಗಿ ನೆರದಲ್ಲಿ ಬ್ರಹ್ಮಚಾರಿಯೆ[ರ]ಸರ
18 ಸ್ಥಾನದಯ್ದುವರ್ಗ್ಗಂಗಳ ಕಯ್ಯೆಲು ಗಾಣದೆಱುವೆತೊ ಕ್ಕಲುಗಳೆಲ್ಲರುಂ ನೆ-
19 ರದು ಯಜಮಾನರಲು ಧರ್ಮ್ಮವ ಮಾಡಲನುಜ್ಞೆಯಂ ಪಡದು
20 ಶ್ರೀತೆಲ್ಲಿಗೇಶ್ವರದೇವರಂ ಶುಭದಿನಮುಹೂರ್ತ್ತದಲು ಇ ಪ್ರತಿಷ್ಠೆಯೆ ಮಾಡಿ
21 ದೇವರಂಗಭೋಗಖಣ್ಡಸ್ಫುಟಿತಜೀರ್ಣೋದ್ಧಾರನಂದಾದೀವಿಗೆಗೆ ಸಲ್ವಂತಾಗಿ
22 [ಶ]ಕವರ್ಷ ೧೧೪೦ ನೆಯ ಬಹುಧಾ(ಂ)ನ್ಯಸಂವತ್ಸರದ ಕಾರ್ತ್ತಿಕದ ಪೌ-
23 ರ್ಣ್ಣಮಿ ಬೃಹಸ್ಪತಿವಾರ ಸೋಮಗ್ರಹಣದಲು ಕಲ್ಯಾಣಕಕ್ಕೆ ಗುರು-
24 ಗಳ ಪಾದಪ್ರಕ್ಷಾಳನಂ ಮಾಡಿ ಧಾರಾಪೂರ್ವ್ವಕಮಾಗಿ ಆಚಂದ್ರಾರ್ಕ್ಕ-
25 ತಾರಂಬರಂ ನಡೆನೆಂತಾಗಿ ಕೂಟ್ಟಾಯೆ ತೆಲ್ಲಿಗರು ಎಳ್ಳ ಮಾಱುಕೊಂಡವ-
26 ಗು ಹೊಂಗೆ ಕಟ್ಟಿದಲಗಿನ ಚಿಕ್ಕತಾರವ ತೆಱುವರು ಬೆಳಿಯೆ ತಾರದರ್ದ್ದದೆ ।।
27 ಎಣ್ಣೆಯನು ಗಾಣಕ್ಕೆ ನಿಚ್ಚಲು ಅರ್ದ್ಧಸೊಲ್ಲಿಗೆಯನು ಆಡಿತಕ್ಕೆ ಎಱೆವರು ।।

## No. 337.

(*A.R. No.* 218 *of* 1918.)

ON A BEAM IN THE MALLIKARJUNASVAMI TEMPLE AT KURUVATTI, HARAPANAHALLI TALUK, SAME DISTRICT.

This undated record refers itself to the reign of the Hoysaḷa king **Vīra-Ballāḷa.** The *Mahāmaṇḍalēśvara* **Gommadēva,** expert in *śāstra* and *śastra,* and promoter of the glory of the **Yādavas,** is said to have made a gift of 36 *mattars* of land to the north of **Haṟuhe** in **Beṇṇeyūru twelve** for the service of the god Āhavamallēśvara and placed it in the charge of **Lōkābharaṇa.** Since this Lōkābharaṇa is also mentioned in a record of **Ballāḷa II,** the present inscription may belong to that king's reign.

1 ಓಂ ನಮಃ ಶಿವಾಯೆ ।। ಜಯತ್ಯಾಹವಮಲ್ಲೋಕಃ । ಶೇಖರೀಕೃತಚಂದ್ರಮಾಃ ।। ಯತ್ಪಾದಪಂಕಜೇ ನಿತ್ಯ-
2 ಮಮರೈರ್ಭ್ಯರ್ಚಿತಂ ।। ಸ್ವಸ್ತಿ ಶ್ರೀಮತ್ಪ್ರತಾಪಚಕ್ರವರ್ತ್ತಿ ರಾಯನಾರಾಯಣ ಹೊಯ್ಸಣ
3 ವೀರಬಲ್ಲಾಳದೇವವಿಜಯರಾಜ್ಯಂ ಸಲುತ್ತವಿರೆ ತತ್ಪಾದಪದ್ಮೋಪಜೀವಿ । ಸ್ವಸ್ತಿ ಸಮಧಿಗತಪಂಚಮ-
4 ಹಾಶಬ್ದ ಮಹಾಮಂಡಳೇಶ್ವರಂ । ದ್ವಾರಾವತೀಪುರವರಾಧೀಶ್ವರಂ । ನಿಜಭುಜಬಳೋಪಾರ್ಜ್ಜಿತವಿಜ-
ಯೆಲ-
5 ಶ್ಮೀಕಾಂತಂ ಪರಬಳಕೃತಾಂತಂ ಅನೇಕಕಸ್ತೂರಿಕಾಸ್ತೂರಿಪೂರಾವಾರಪರಾಯಣಂ । ಮಂಡಳಿಕನಾರಾಯಣ
6 ಯೋದವಕುಳಕುಮುದಿನೀನಿಶಾಕರಂ ! ಸತ್ಯರತ್ನಾಕರಂ । ನೀತಿಚೂಡಾಮಣಿಕ್ಯಂ । ಅಮೋಘವಾಕ್ಯಂ । ಶಂಖ-
ಚಕ್ರಗದಾಧರಂ ಸಕಳ-
7 ಕಳಾಧರಂ । ಸಿಂದಸಿಗುಣಾನ್ವಯೆಪ್ರಸೂತಂ । ಲೋಕವಿಖ್ಯಾತಂ । ಚಲದಂಕರಾಮಂ । ಭುಜಬಳಭೀಮಂ
ಅಸಹಾಯಸಮರ್ತ್ಥ
8 ಗಂಡರತಿರ್ತ್ಥಂ ವೀರಗೋಮೆದೇವರು ಶ್ರೀಮದಾಹವಮಲ್ಲೇಶ್ವರದೇವರ್ಗ್ಗೆ ಖಂಡಸ್ಫುಟಿತಜಿಂರ್ಣೋದ್ಧಾ-
ರಾಂಗಭೋಗರಂಗಭೋಗ-
9 ಕ್ಕೆ ಬೆ(ಂ)ಣ್ಣೆಯೊರ್ವ(ಂ)ನ್ನೆರಡಱ ಬಳಿಯ ಬಾಡಂ । ಹಱುಹೆಯಿಂ ಬಡಗಲು ಪಾಂಡ್ಯದೇವನ ಬಲ್ಮ-
ನುಶ್ಯ-
10 ರು ಬೆ(ಂ)ಣ್ಣೆಯೊರ ಚಂಡುಗಿದೇವನುಂ ಕಾಳಗೌಡನುಂ ।। ಹಱುಹೆಗಿದುತ್ತರವೆನಿಸೆಲ್ಲುಱುವತ್ತಿಯೆ
ದಕ್ಷಿಣಂ ಸ್ವಪೂರ್ವ್ವ-
11 ಮೂಂವತ್ತಱು ಮತ್ತರು ಕೆಂಮೊಗೆಯಂ ನೆಜೆ ಲೋಕಾಭರಣಚರಣಭಕ್ತಿಯೊಳತ್ತರು ।। [ಮಂಗಳ]
ಶ್ರೀ [।।*]

## No. 338.

(*A. R. No.* 320 *of* 1925.)

ON A STONE PLANTED IN FRONT OF THE MURUKAL-MATHA AT KOTTUR, KUDLIGI TALUK, SAME DISTRICT.

This is dated the cyclic year **Vishu, Āshāḍha, ba. 5, Sunday**, corresponding to **A.D. 1221, July 11, Sunday.** Hence the Hoysaḷa king **Vīra-Narasiṁha** to whose reign the record belongs may be the second of that name. His general, **Kēśava-Daṇḍanāyaka,** who is stated here to have been the cause of the expansion of his kingdom, made a gift of the village **Māvinamāge** to **Śaṅkaranārāyaṇa-Bhaṭṭa, Bhēruṇḍana-Bammayya, Achyuta-Bhaṭṭa** and to **Nāga,** (son ) of **Chīlaya-Nāyaka** for the purpose of maintaining a *satra* (feeding house) and appointed the *Mummuridaṇḍas*, **Hariga Kāḷa-Bōva, Jagaddaḷa-Bammadēva's** son **Sōyidēva** and **Ghaṭṭidēva** for the protection of the charity. *Sēnābōva* **Sōmayya** wrote this and the mason, Aṇṇōja engraved it. We know from other records that Kēśava was a Brāhman general. It also records a grant of land to the god Uḍakēśvaradēva by the *Mantri* **Muktidēva.**

1 ಶ್ರೀಕಂಕರನಾರಾಯಣಾಯನಮಃ ॥ ಜೀಯಂ ಕೀರ್ತ್ತಿಪ್ರಯೆನೋ .
2 ಬೆಂಬಂ ಕೇಕವಮೆಂತ್ರಿಪುಂಗವಂ ಕೂರ್ತ್ತಿತ್ತಂ ಕಂಕರನಾರಾಯೆ-
3 ಣನೆಂಬಂಕದ ಭಟ್ಟಂಗೆ ಸಂದ ಮಾವಿನಮಾಗೆಯಂ ॥ ಸೋಮಂ ಸುವಿಕ್ರಮಪಾಳರಣೋ-
4 ವದೆ ಕೊಂದಿಕ್ಕಿ ಬೆಂಬೆಯಂ ಕೇಕವನು ಭೂವಿನುತರೊಸದು ಕೊಟ್ಟರು ಮಾವಿನಮಾ-
5 ಗೆಯೆಂಬ ಹಳ್ಳಿಯಂ ಜಗವಜೆಯಲುರ್ವಿಯೆಸಪತಿ ನರಸಿಂಹ್ವನ ರಾಜ್ಯ-
6 ದೊಳ್ ಕೊಟ್ಟೂರ ಹಳ್ಳಿ ಮಾವಿನಮಾಗಯಂ ಮುದದಿಂ ಜಗದೊಳ್ ಸೋಯಿ-
7 ಯ ವುದಿತೋದಿತಮಾಗಿ ಕೊಟ್ಟರಾಚಂದ್ರಾರ್ಕ್ಕಂ ॥ ಸ್ವಸ್ತಿ ಸಮಸ್ತಪ್ರಸಸ್ತಿಸಹಿ-
8 ತಂ ಶ್ರೀಮನುಮಹಾರಾಜಾಧಿರಾಜಂ ಪ್ರತಾಪಚಕ್ರವರ್ತ್ತಿ ಮೆಲೆರಾ-
9 ಜರಾಜ ಮೆಲಪರೊಳು ಗಂಡ ಕದನಪ್ರಚಂಡ ಯಾದವಕುಳಸ್ವಾಮಿ ಸದಾಜಚೂಡಾ-
10 ಮಣಿ ಹೋಕಣವೀರನಾರಸಿಂಹದೇವರಾಜ್ಯಾಭ್ಯುದೆಯಕರಣಕಾರಣ ಭುಜಬಳ-
11 ಭೀಮ ವರಬಳಸಾಧಕ ಬೆಂಬಿದೇವ ಕೇಕವದೆಂಡಾಧಿಪಂ ಕಾದಿ ಗೆಲುದಂ ವಿಷುಸಂವತ್ಸ-
12 ರದಯಾಶಾಡ ಬಹುಳ ೫ ಯಾದಿವಾರದಂದು ರಾಯಭಟ್ಟ ಕಂಕರನಾರಾಯಣ-
13 ನೆಂಬ ಭಟ್ಟಂಗೆ ಭೀರುಂಡನ ಬಂಮೆಯನೆಂಬ ಭಟ್ಟಂಗೆ ಯಚ್ಯುತನೆಂಬ ಭಟ್ಟಂಗೆ ಚೀಲಯ-
14 ನಾಯಕನ ನಾಗಂಗೆ ಮಾವಿನಮಾಗೆಯೆಂಬ ಹಳ್ಳಿಯಂ ಕೊಟ್ಟ ಸತ್ರಕ್ಕೆ ಯೆರ-
15 ಡು ಹಂನೆರಡಱ ಪ್ರಭುಗಳು ಮುಂಮುರಿದಂಡ ಪಟ್ಟಣಸ್ವಾಮಿಗಳು ಹಟ್ಟ-
16 ಗಾಱ ಹರಿಗ ಕಾಳಬೋವೆ ಮೆಂಡಳಿಕ ಜಗದ್ದಳ ಬಂಮಿದೇವನ ಸುಪುತ್ರ
17 ಸೋಯಿದೇವ ಘಟ್ಟಿದೇವ ಯೀ ಧರ್ಮ್ಮವಂ ಸ್ವಧರ್ಮದಿಂ ಪ್ರತಿಪಾಳಿಸಿದರು ಯೀ ಧರ್ಮ್ಮಕ್ಕೆ ಯಾ-
18 ವನಾನು ಕಂಟಕನಾದವಂಗೆ ಗಂಗಾತೀರದೆಲ್ಲಿ ಸಾಯಿರ ಬ್ರಾಹ್ಮ-
19 ಣರುವಂ ಸಾಯಿರ ಕವ್ರುಲೆಯೆ ಕೊಂದಂತಹ ನರಕ ಈ ಧರ್ಮ್ಮವಂ ಯಾರಯಿ-
20 ದು ರಕ್ಷಿ[ಸಿ*]ದವಂಗೆ ಯಾ ಬ್ರಾಹ್ಮಣರಿಂಗೆ ಯಾ ಗಂಗಾತೀರದಲ್ಲಿಯಾ ಕವ್ರುಲೆಗಳಂ ಕೊ-
21 ಟ್ಟ ಫಲ ಯೀ ಸಾಸನವಂ ಯಯ್ಯಾವಳಯ ಸೇನಬೋವ ಸೋಮಯ್ಯ ಯೀ ಸಾ[ಸ*]ನ-
22 ಂ ಮಂಡಳಿಸಿದಾತ ಕಲುಕುಟಿಗ ಅಣೊ್ಣಜ ಮಂಗಳ ಮಹಾಶ್ರೀ ಶ್ರೀ ಱ
23 ಶ್ರೀಮತುಡಕೇಶ್ವರದೇವರಿಗೆ ಮಂತ್ರಿ ಮೂರ್ತ್ತಿದೇವರು ತಾವು ಹಡದ ಕೆಯಿಂ ಹೊಲಗೇರಿ-
24 ಯ ಪಡೊವಲು ಮೆತ್ತರು ೪ ಬೆಂಬೇಶ್ವರದ ಗದೆಯಿಂದ ದೇವರ ಬಡಗಣ ಗದೆ ೂಜಂ ಕಾನಿ . . . . .
25 . ಧಾರಾಪೂರ್ವ್ವಕವಾಗಿ ಕೊಟ್ಟರು ಆ ದೇವರ ತಪ್ಪೋಧನ ಬೈಚಜೀಯ ಆತನ ತಂಮ ಮಲ್ಲ-
26 ಜೀಯ ತಂಮ ಸಕಲಸಾಮ್ಯದೊಳಗೆ ತಮಗೆ ಎರಡು ಭಾಗೆ ಮಂತ್ರಮೂರ್ತ್ತಿಗಳಿಗೆವೆರ-
27 ಡಂ ಭಾಗಿಯಂ ಕೊಟ್ಟರು । ಶ್ರೀ ।

## No. 339.

(*A. R. No.* 281 *of* 1918.)

ON A SLAB LYING IN A FIELD TO THE SOUTH OF ANIJIGERE, HARAPANAHALLI TALUK, SAME DISTRICT.

The record is dated **Śaka 1145, Chitrabhānu, Pushya, ba. 8, Sōmavāra, Uttarāyaṇa saṅkramaṇa, Vyatīpāta** corresponding to **A.D. 1222, December 28, Monday,** on which day the *tithi* commenced after ·52; the Śaka year was current. The inscription refers itself to the reign of the Hoysaḷa king **Vīra-Nārasiṁhadēva.** When his *Mahāpradhāna* **Ammaṇṇa-Daṇṇāyaka** was administering all the *dēśas*, the latter's subordinate, **Asagōḍa Pallava-Sāvanta** of the **Sonda-kula**, who was the *Māhānāḷprabhu* of the **Sāviranāḍu** made a gift of some plots of land (specified) for the service of the god Kalidēva in the village **Kūchigōḷa,** which was situated in **Uchchaṅgi thirty.** Both Ammaṇṇa and Asagōḍa Pallava are said to have been great warriors.

1 ಓ ನಮಸ್ತುಂಗಶಿರಸ್ತುಂಬಿಚಂದ್ರಚಾಮೆರೆಚಾ-
2 ರವೇ ತ್ರೈಳೋಕ್ಯನಗರಾರಂಭ(ಂ)ಮೂಲಸ್ತಂ-
3 ಭಾಯ ಸಂಭವೇ ॥
4 [ಸ್ವ]ಸ್ತಿ ಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮ-
5 ಹಾರಾಜಾಧಿರಾಜಂ ಪರಮೇಶ್ವರ ಪರಮಭಟ್ಟಾರಕಂ ದ್ವಾರ-
6 ವತೀಪುರವರಾಧೀಶ್ವರಂ ಯಾದವಕುಳಾಂಬರದ್ಯುಮಣಿ
7 ಸರ್ವಜ್ಞಚೂಡಾಮಣಿ ಮಲೆರಾಜರಾಜ ಮಲಪರೊ-
8 ಳುಗಂಡ ಗಂಡಭೈರುಂಡ ಕದನಪ್ರಚಂಡನಸಹಾಯ-
9 ಕೂರನೇಕಾಂಗವೀರ ಕನಿವಾರಸಿದ್ಧಿ ಗಿರಿದುರ್ಗ್ಗಮಲ್ಲ ಚ-
10 ಲದಂಕರಾಮ ಮಗರರಾಜ್ಯನಿರ್ಮೂಳನಂ ಪಾಂಡ್ಯರಾಜ್ಯ
11 ದಿಶಾಪಟನಂ ಚೋಳರಾಜ್ಯಪ್ರತಿಷ್ಠಾಚಾರ್ಯ್ಯ
12 ನಿಸ್ಸಂಕಪ್ರತಾಪಚಕ್ರವರ್ತ್ತಿ ಹೊಯಿಸಣ ಶ್ರೀವೀ-
13 ರನಾರಸಿಂಹದೇವರ ರಾಜ್ಯಮುತ್ತರೋತ್ತರಾಭಿವೃದ್ಧಿಪ್ರ-
14 ವರ್ದ್ಧಮಾನಮಾಗೆ ಯಾಚಂದ್ರಾರ್ಕ್ಕತಾರಂಬರಂ ಸಲುತ್ತಮಿ-
15 ರೆ ತತ್ತಾದಪದಮ್ಮೋಪಜೀವಿ.ಶ್ರೀಮನುಮಹಾಪ್ರಧಾನಂ ಸೆ-
16 ರ್ವಾಧಿಕಾರಿ ಮಹಾಪಸಾಯಿತಂ ಪರಮವಿಶ್ವಾಸಿ ರಾಯದಂಡನಾ-
17 ಥ ಅಂಮೆಣ್ಣದಣ್ಣಾಯಿಕರು ಸಮಸ್ತರಾಜ್ಯಭರನಿರೂಪಸೆಮುದ್ದ-
18 ರಣದುಷ್ಟನಿಗ್ರ[ಹ*]ಶಿಷ್ಟಪ್ರತಿಪಾಳನೆಯಿಂ ಸಮಸ್ತದೇಶಾಧಿಕಾರಂ ಮಾಡು-
19 ತ್ತವಿರೆ ತತ್ತಾದಪದಮ್ಮೋಪಜೀವಿ ಸ್ವಸ್ತಿ ಸಮಸ್ತವಸುಧಾತಳಪ್ರಖ್ಯಾತನುಂ
20 ಸತ್ಯಲೋದ್ಭವನುಂ ಸೊಂದೆಕುಲಕಮಳಮಾರ್ತ್ತಂಡನುಂ ನುಡಿದಂತೆ
21 ಗಂಡನುಂ ಉಚ್ಚಂಗಿದೇವಿಯ ಲಬ್ಧವರಪ್ರಸಾದಾಧಿಪತ್ಯನುಂ ಮುಸುವೆ-
22 ರಾದಿತ್ಯನುಂ ಮಹಿವುಗೆಕಾವನುಂ ಶರಣಾಗತವಜ್ರಪಂಜರನುಂ ಅಸಂ-
23 ಖ್ಯಾತಮಾಹೇಶ್ವರಗಣಕುಮಾರನುಂ ಶ್ರೀಸ್ವಯಂಭುದೇವರ ದಿ-
24 ವ್ಯಶ್ರೀಪಾದಪದ್ಮಾರಾಧಕಂ ಸಾವಿರನಾಡ ಶ್ರೀಮನುಮಹಾನಾಳ್ವ ಪ್ರ-
25 ಭು ಅಸಗೊಡ ಪಲ್ಲವಸಾವಂತನು ಉಚ್ಚಂಗಿ ಮೂವತ್ತೊಳು
22 ತಂನ ಪ್ರಭುತ್ತಿಕೆಯೆ ಕೂಚಿಗೊಳದೆ ಮೂಲಸ್ಥಾನ ಕಲಿದೇವ
27 . . . . . ನಿವೇದ್ಯಕ್ಕಂ ನಂದಾದೀವಿಗೆಗಂ ಖಂಡಸ್ಫುಟಿತಜೀರ್ನೋದ್ಧಾರಕ್ಕಂ ಬಿಟ್ಟ
28 ದತ್ತಿ ಸಕವರ್ಷದ [೧]೦೪೫ ನೆಯ ಚಿತ್ರಭಾನುಸಂವತ್ಸರದೆ ಪುಷ್ಯ ಬಹು-
29 ಳ ಅಷ್ಟಮೀ ಸೋಮವಾರ ಉತ್ತರಾಯಣಸಂಕ್ರಮಣ ವ್ಯತೀಪಾತದೊಳು
30 ಬಿಟ್ಟ ಭೂಮಿ ಹಿರಿಯೆಕೆ . . . . . ಂಬಿನಗದ್ದೆ ಪಡ-
31 ವಣ ಹಳ್ಳಿಗು ಸಹಿತ ಕಂಮೆ . . . . . ಚಿಕ್ಕ-
32 ತೋಟದೆ ಗದ್ದೆ ಕಂಮೆಯಿಂನೊಳು ಂಂ . . . . . ಳಗೆ

33 ಮೊಱು ಮತ್ತರು ಮ ಷಿ ದೇವರ ಮುಂದೆಣ . . . . . .
34 ಮನಿ ಚಿಂಚಿಮೆಯನ ಈಟ್ಟಿಯಲಿ ರಾವೆಗಟ್ಟದ ದಾ . . . . . .
35 ಣ ಮತ್ತರೆರಡು ಮ ಂ ಮಂ ಶಿವತೀರ್ತ್ಥದ ನೀರುಭೊಮಿ ಕೀಳುಭೊ[ಮಿ]
36 ಸಹಿತ ಸ್ವಸ್ತಿ ಯಮೆನಿಯಮೆಧ್ಯಾನಧಾರಣವೊೀನಾನುಷ್ಠಾನಜ-
37 ಪಸಮಾಧಿಶೀಲಗುಣಸಂಪನರಪ್ಪ ಆಳುವಪಂಡಿತರ ಮಂಮ ಕೇಶವರಾ-
38 ಜಪಂಡಿತರ ಕಾಲಂ ಕಚ್ಚಿ ಧಾರಾಪೂರ್ವ್ವಕಂ ಮಾಡಿಕೊಟ್ಟನಿನ್ತೀ ಧರ್ಮ್ಮಮೆ-
39 ನಾರು ಪ್ರತಿಪಾಲಿಸಿದಡಂ ನಾರಣಾಸಿಯೆಲು ಯೇಳುನೂಱು
40 ಮನುಕ್ಯ ಸಬ್ರಾಹ್ಮಣರಿಗೇಳುನೂಱು ಕವಿಲೆಯ ಪದಕ್ಷಿಣೆ ಸಹಿ-
41 ತ ದಾನಮಾಡಿದ ಫಲಮೆಕ್ಕು ಇಂತೀ ಧರ್ಮ್ಮಮನಾರು ಕೆಡಿಸಿದೆಡಂ ವಾರ-
42 ಣಾಸಿಯಲೇಳ್ನೂಱು ಮನುಕ್ಯ ಬ್ರಾಹ್ಮಣರನೂ ಯೇಳ್ನೂಱು
43 ಕವಿಲೆಯೆನೂ ಕೊಂದೆ ದೋಷಮೆಕ್ಕು ॥

## No. 340.

(*A. R. No.* 116 *of* 1913.)

ON THE FOURTH SLAB SET UP IN THE COURT-YARD IN THE BHIMESVARA TEMPLE AT NILAGUNDA, SAME TALUK AND DISTRICT.

This is dated **Śaka 1145 Subhānu, [Mā]gha, śu. 11, Bṛihaspativāra** corresponding to **A. D. 1224 February 1 Thursday,** f.d.t. ·87. It belongs to the reign of the Hoysaḷa king **Narasiṁhadēva (II).** His father **Ballāḷa** is stated to have driven out single-handed the **Sēvaṇa** army from **Soraṭūr** up to the bank of the **Kṛishṇavēṇi river,** being mounted on his elephant. It registers the gift of some village (name lost) for the service of the god Bhīmēśvara.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ
2 ತ್ರಯಿಳೋಕ್ಯನಗರಾರಂಭಮೂಲಸ್ತಂಭಾಯ
3 ಕಂಭವೇ ॥ ಎರಡುಂ ಲಕ್ಕಂಬರಂ ಸುತ್ತಣಯೆರಸನಿಸಂನಾಹದಿಂ ಪ-
4 ನೆರಡುಸಾವಿರವರುಕಶ್ರೇಣಿವೋಲಂ ಕವಣೆಯ ಮಣಿಯೆ ಪರಿ-
5 ಯಾಣದಿಂ ತೋರ್ಕೆವೆತ್ತೆಯ್ತರೆ ತಂನೊಂದಾನೆಯಿಂ ಸೇವ್ವಣನ್ರಿಪಬಳ-
6 ಮಂ ನೂಂಕೆ ಬೆನಟ್ಟಿ ಕೊಂದೆಂ ಸೊರಟೂರಿಂ ಕೃಷ್ಣವೇಣಿಯ ನದಿಯ ತ-
7 ಡಿವರಂ ವೀರಬಲ್ಲಾಳರಾಯಂ ॥ ಕಲಿಬಲ್ಲಾಳನಿಪಾಳಿಕಂಗವಧಿಕೈಶ್ವರ್ಯ್ಯ-
8 ಕಡರ್ಪಾದ ಪದುಮೇಲಮಾದೇವಿಗಮಳತೆಂವೆ ವುದಯಂಗೆಯಿದಂ ನರಸಿ-
9 ಂಹಾಧಿಪಂ ಲಲನಾಮೋಹನಮೂರ್ತ್ತಿ ಕೀರ್ತ್ತಿರಮಣಂ ಸಾಹಿತ್ಯರತ್ನಾಕರಂ ಬಳ-
10 ವದ್ಯಯಿರಿನ್ರಿಪಾಳಕಾಳಕಂಳಿಕಂ . . . . . ಕಳ್ಪೆದ್ರುಮಂ ॥ ಮೊದಲೊ-
11 ಳು ವಿಕ್ರಮಪಾಳ ಪಾಂಸುರನಿತ್ತಲುಕೊಂದೆ . . . ಳ್ಪಿರ್ದನಾಕಾಡವರಾಯನಂ
12 ಮಗರನಂ ಪಾಂಡ್ಯನಂ ಕೊಂದನು ನಾಮೆದಮೆ . . . ಸಟ್ಟಮನದಂ ಜೋಳಂಗೆ ಮುಂ-
13 ದಿಟು ಕಟ್ಟಿದನಾಸೇತುವಿನೊಳು ನರಸಿಂಹದೇವ . . . . . ಸ್ತಂಭಮಂ । ಗದ್ಯ ॥
14 ಸ್ವಸ್ತಿ ಸಮಸ್ತಭುವನಾಶ್ರಯಂ . . . . . ಮಹಾರಾಜಾಧಿರಾಜಂ ದ್ವಾರವ-
15 ತೀಪುರವರಾಧೀಶ್ವರಂ ಯದುನಂ . . . . . ಸರ್ವ್ವಜ್ಞಚೂಡಾಮ-
16 ಣಿ ಮಲೆರಾಜರಾಜಂ ಮಲೆಪರೊಳು . . . . . ವಾರಸಿದ್ಧಿ ಗಿರಿದುರ್ಗ್ಗಮ-
17 ಲ್ಲ ನಿಸ್ಸಂಕಪ್ರತಾಪಚಕ್ರವರ್ತ್ತಿ ಹೊಯ್ಸಣ . . . . . ವನು ನಿಜರಾಜಧಾನಿ
18 ದೋರಸಮುದ್ರದೊಳು ಸುಖಸಂಕಥಾ . . . . . ಳುತ್ತಿರ್ದ್ದಾ ಪ್ರಸ್ತಾವದೊಳಂ ॥
19 ಕಕವರುಕ ೧೧೪೫ ನೆಯ ಸ್ವಭಾನುಸಂವ . . . . . ಳ ಸು ೧೧ ಬ್ರುಹವಾರ-
20 ದಂದು ನೊಣಂಬವಾಡಿ ಸುವತ್ತಿ . . . . . ಶ್ರೀಮತು ಜನಮೇದೆಯ-
21 ದತ್ತಿಯಾದ ಅನಾದಿಯಗ್ರಹಾರ . . . . . ಭೀಮೇಶ್ವರದೇವರಿಗೆ ಅಂ-
22 ಗಭೋಗರಂಗಭೋಗಉಪಾರಕ್ಕಂ . . . ಸೆನಕ್ಕೆ ಮೂನೂರ್ವ್ವರಿಗೆಉಂವಾಗಿ
23 ಮಾಚಿಯಹಳ್ಳಿಯೆ ಮೂಡಣಯೆ . . . . . ಬಹಳ್ಳಿಯನು ಧಾರಾಪೂ-

24 ವ್ರ್ಕಂ ಮಾಡಿಕೊಟ್ಟು ಆ ಧರ್ಮ್ಮವನು ಮೂನೂಬ್ಬರು ದೇವರ ಶ್ರೀಕಾರ್ಯ್ಯವೆ ನ-
25 ಡಸುವರು ॥ ಪ್ರಯೆದಿಂದಿಂತಿದನೆಱಿದೆ ಕಾಯಿವೆ ಪುರುಕಂಗಾಯುಂ
26 ಜಯಶ್ರೀಯುಮಕ್ಕೆ ಯಿದೆಂ ಕಾಯೆದೆ ಕಾಯಿವೆ ಪಾಪಿಗೆ ಕುರುಕ್ಷೇತ್ರಂಗಳೊಳ್
27 ವಾರಣಾಶಿಯೊಳಿಳ್ಕೀಟಮುನೀಂದ್ರರಂ ಕವಿಲೆಯಂ ವೇದಾಧ್ಯರಂ ಕೊ-
28 ಂದೆದೊಂದುಯೆಶಂ ಪೊದ್ದುಗುಮೆಂದು ಸಾಱಿದೆಪ್ರದೀ ಶೈಳಾಕ್ಷರಂ ಧಾತ್ರಿಯೊ-
29 ಳೊ ॥ ಸ್ವದೆತಾ್ತಂ ಪರದೆತಾ್ತಂ ನಾ ಯೋ ಹರೇತಿ ವಸುಂಧರಾ[ಂ*] ಶಷ್ಟಿವರ್ಷಸಹ-
30 ಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿ[ಃ*]॥ ಮಂಗಳ ಮಹಾಶ್ರೀ ಶ್ರೀಶ್ರೀಶ್ರೀ

## No. 341.

(*A. R. No.* 447 *of* 1914.)

ON A PILLAR OF THE MUKHAMANDAPA IN THE KALLESVARA TEMPLE AT SOGI, HADAGALLI TALUK, SAME DISTRICT.

This is dated the **6th year of the Hoysaḷa king Vīra-Narasiṁha,** the cyclic year **Vyaya, Chaitra, śu. 10, Sōmavāra.** The date works out correctly only for **A. D. 1226, March 9 Monday,** f.d.t. ·44. And so the king in whose reign the record is dated must be **Vīra-Narasiṁha II.** Under the orders of **Bommaya-Daṇṇāyaka,** the *Mahāpradhāna* of the king, and with the consent of **Gōparasa, Bhūtarasa, Hēmayya** and **Maṅgaṭeyya, Siripaṇṇa,** the officer of tolls, **Mailāradēva** and others made a grant of 2 *gadyāṇas* each year out of the tolls-revenue in **Pāṇḍya-nāḍu** for the service of the god Kalidēva of **Sōge.** Similarly the *Heggaḍe* **Dēvayya** and others made a grant of 2 *gadyāṇas* for the service of the same god under the orders of **Hiriyaṇṇa,** the *Heggaḍe* of **Boppaya-Daṇṇāyaka,** who was the officer of the *bilukoḍe* tax.

1 ಸ್ವಸ್ತಿ ಶ್ರೀಜಯಾಭ್ಯುದಯಶ್ಚ [॥*] ಶ್ರೀಮತ್ಪ್ರತಾಪಚಕ್ರವ-
2 ರ್ತ್ತಿ ಹೊಯ್ಸಣವೀರನಾರಸಿಂಹವೇ[ವ*]ರ್ಷದ ೬ ನೆಯ ಬ್ಯಯಸೌಂ-
3 ತ್ಸರದ ಚೈತ್ರ ಸುದ್ಧ ೧೦ ಸೋಮವಾರದಂದು ಶ್ರೀಮನಮಹಾಪ್ರಧಾ-
4 ನಂ ರಾಯಭೂಬಳಗಜಾಂಕುಶ ವಿಜಯವಿನೋದಿ ಬೊಂಮಯ-
5 ದ(ಂ)ಣ್ಣಾಯಿಕರ ಬೆಸದಿಂ ಗೋಪರಸ ಭೂತರಸ ತಿಗಟಿಯ್ಯನ ಹೇಮಯ್ಯ
6 ಮೆಂಗಟಿಯ್ಯಂಗಳಯಪ್ಪಣೆಯಿಂ ಶ್ರೀಮತು ಪಾಂಡ್ಯನಾಡ ಸುಂ-
7 ಕಾಧಿಕಾರಿ ಸಿರಿಪಣ್ಣಮಯ್ಯಾರದೇವ ದಿವಕರದೇವ ಮಲ್ಲಯ್ಯಹೆ-
8 ಗ್ಗಡೆಗಳು ಸೋಗ್ವೆಯ ಶ್ರಸ್ವೆಯೆಂಭುಕಲಿನಾಥದೇವರಂಗಭೋಗನಿವೇದ್ಯಕ್ಕಂ ಬಿಟ್ಟ ದ.
9 ತ್ತಿಯಾ ಪಾಂಡ್ಯನಾಡ ವಡಿಕೇಣಿಯ ಸ್ಥಳದ ಕೋಗಳಿನಾಡ ದವಸಾ-
10 ಯದೊಳಗೆ ವರಿಕಂಪ್ರತಿ ನಿಬಂಧವಾಗಿ ಸಲುವ ಗದ್ಯಾಣವೆರಡುಯಾ ಬಿ-
11 ಲುಕೊಡೆಯಧಿಕಾರಿ ಬೊಪ್ಪಯೆದಣ್ಣಾಯಿಕರ ಹೆಗಡೆ ಹರಿಯಣ್ಣಂಗ-
12 ಳಪ್ಪಣೆಯಿಂ ಹೆಗ್ಗಡೆ ದೇವೆಯ ಕೊಂಮಯ ನೆಲ್ಲಕೂಳ ಮಾದಯ್ಯ-
13 ಂ[ಗ*]ಳುಂ ಯಾ ದವಸಾಯೆದಲು ಕೊಟ್ಟ ಗದ್ಯಾಣಮೆರಡು ಅನ್ತ ಗ ೪-
14 ವಂ ಆವಧಿಕಾರಿ ಬಂದಡಂ ಕೇಣಿವೊಳಗೆಳಹಿ ಪ್ರತಿಪಾಳಿಸುವರು ಯೀ
15 ಧರ್ಮ್ಮವನು ಪಾಳಿಸುವರು ಪಾಳಿಸದಿರ್ದಡೆ ವಾರಣಾಸಿಲು ಕವಿಲೆಯ ಕೊಂದೆ-
16 ರು ॥ ಮಂಗಳ ಮಹಾಶ್ರೀ ಶ್ರೀಶ್ರೀ [॥*]

## No. 342.

(*A. R. No.* 449 *of* 1914.)

ON ANOTHER PILLAR IN THE SAME PLACE.

This record is of the same date and belongs to the same king as No. 447 of 1914. It mentions the same personages. The god for whose service *gadyāṇa* 1 and *paṇas* 10 were granted is Kōḍiya-Sōmanāthadēva at **Sōge.**

1 ಸ್ವಸ್ತಿ ಶ್ರೀಜಯಾಭ್ಯುದಯಶ್ಚ [॥*]ಶ್ರೀಮತ್ಪ್ರತಾಪಚಕ್ರವ-
2 ರ್ತ್ತಿ ಹೊಯ್ಸಣವೀರನಾರಸಿಂಹವೇವ[ವ*]ರ್ಷದ ೬ ನೆಯ ಬ್ಯಯ-

3 ಯಃಸೌಂತ್ಸರದ ಚೈತ್ರ ಸುದ್ಧ ೧೦ ಸೋಮವಾರದಂದು ಶ್ರೀಮ-
4 ನ್ಮಹಾಪ್ರಧಾನಂ ರಾಯಭೊಬಳೆಗಜಾಂಕುಕಂ ವಿಜಯವಿನೋ-
5 ದಿ ಬೊಮ್ಮಯದ(೦)ಣ್ಣಾಯಕರ ಬೆಸದಿಂ ಗೋವರಸೆ ಬೂತರಸೆ ತಿಗಟಿಯ್ಯೆ-
6 ನದೇವಯ್ಯ ಮಂಗಟಿಯ ದೇವಯ್ಯಂಗಳಪ್ಪಣೆಯಿಂ ಶ್ರೀಮತು ಪಾಂಡ್ಯನಾಡ
7 ಸುಂಕಾಧಿಕಾರಿ ಸಿರಿಪಣ್ಣಮಯ್ಯಾರದೇವ ದಿವಕರದೇವ ಮೆಲ್ಲಯ ಹೆಗ್ಗಡೆಗಳು ಸೋ-
8 ಗೆಯ ಕೋಡಿಯ ಶ್ರೀಸೋಮನಾಥದೇವರ ರಂಗಭೋಗನಿವೇದ್ಯಕಂ ಬಿಟ್ಟ ದತ್ತಿಯಾ
9 ಪಾಂಡ್ಯನಾಡ ಪಡಿಕೇಣಿಯ ಸ್ಥಳದ ಕೋಗಳಿನಾಡ ದವಸಾಯದೊಳಗೆ ವರಿ-
10 ಕಂಪ್ರತಿ ನಿಬಂಧವಾಗಿ ಸಲುವ ಗದ್ಯಾಣ ೧ ಪ ೫ ಯಾ ಬಿಲುಕೊಡೆಯಧಿ-
11 ಕಾರಿ ಬೆಂಪೆಯ್ಯದಂಣ್ಣಾಯಕರ ಹೆಗ್ಗಡೆ ಹರಿಯ(೦)ಣ್ಣಂಗಳಪ್ಪಣೆಯಿಂ ಹೆ-
12 ಗ್ಗಡೆ ದೇವಯ್ಯ ಕೊಂಮಯ್ಯ ನೆಲ್ಲಕೂಳ ಮಾದಯ್ಯಗಳು ಯಾ ದವೆ-
13 ಸಾಯದಲು ಕೊಟ್ಟ ಪ ೫ ಆವಧಿಕಾರಿ ಬಂದಡಂ ಕೇಣಿವೊಳಗೆಳಿಹಿ ಪ್ರ-
14 ತಿಪಾಳಿಸುವರು ಯೊ ಧರ್ಮ್ಮವನು ಪಾಳಿಸುವರು ಪಾಳಿಸಿದಿದ್ದಡೆ ವಾರಣಾ-
15 ಸಿಆಲು ಕವಿಲೆಯೆ ಕೊಂದೆರು ಮಂಗಳ ಮಹಾಶ್ರೀ ಶ್ರೀಶ್ರೀ[॥*]

## No. 343.

(*A.R. No.* 280 *of* 1925).

ON A SLAB SET UP IN THE KALLESVARA TEMPLE AT BENNIKAL, KUDLIGI TALUK, SAME DISTRICT.

This is dated **Śaka 1148, Byaya, Chaitra, śu. 11, Ādityavāra, Uttarāyaṇa-saṅkramaṇa, Vyatīpāta.** The date is irregular. Chaitra śu. 11 in Vyaya corresponded to A.D. 1226 March 11, Wednesday (not Sunday) ; nor was it a day of Saṅkramaṇa. It belongs to the reign of the Hoysaḷa king **Vīra-Narasiṁhadēva** (II). It extols the Hoysaḷa dynasty and traces the king's descent from **Saḷa** and states that the *Mahā-pradhāna* **Amitayya-Daṇḍanāyaka,** son of **Vāmarasa** of the Bhāradvaja-*gōtra* and Kāṇv-*ānvaya*, and a great general and warrior, constructed the temples of Padmalēśvara, Amṛitēśvara, Lakshimīnārāyaṇa, Vāmēśvara, Ballāḷēśvara and Narasiṁha at **Beṇṇekallu,** the chief town of **Beṇṇekallu twelve** in **Kōgaḷi five-hundred** in **Noḷamba-vāḍi-nāḍu** and that he made grants of land in several villages for their worship, maintenance and repairs of the temples. The grants are said to have been made by the king in the presence of the gods Vajrēśvara and Sōmanātha, after washing the feet of the Śaiva teacher **Khaḷēśvaradēva,** the *Rājaguru*. The genealogy and exploits of the Brāhmaṇ *Daṇḍanāyaka* **Amitayya,** as well as the spiritual descent of Khaḷēśvara are given in elegant Kannaḍa poetry.

1 ಶ್ರೀ ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭಮೂಲಸ್ತಂಭಾಯಕಂ -
ಭವೇ ॥ ಪಾಯಾದ್ಬುಜಂ ನೃಸಿಂಹಸ್ಯ । ದಂಷ್ಟ್ರಾಕಾ-
2 ಪೂರ್ವ್ವಪೌತ್ರಿಣಃ ಸಹಾಧ್ಯಾಯಾನುಬಂಧೇನ ಭುವನೋದ್ಧಾರಕರ್ಮ್ಮಣಿ ॥ ಕಂದ ॥ ಸಳನೆಂಬ ಯಾ-
ದವಂ ಹೊಯ್ಸಳನಾದಂ ಕಕಕಪುರದ ವಾಸಂತಿ-
3 ಕೆಯೊಳ್ಮಿಡು ಪುಲಿ ಪೊಯ್ವುದು ಪೊಯ್ಸಳಯೆನೆ ಮುನಿ ಬಿಳಿಕಮಾಯ್ತು ಪೊಯ್ಸಳವಂಕಂ ॥ವೃ॥ ಎನಿ-
ಬಪ್ಪೊರ್ವಯ್ಸಳವಂಶ್ಯರಂತನಿಬರುಂ ಪ್ರಖ್ಯಾ-
4 ತರಾರಾಯರೊಳು ವಿನಯಾದಿತ್ಯನವೆಂಗೆ ಪ್ರತ್ರನೆಜೆಯೆಂಗಂ ತತ್ಸುತಂ ವಿಷ್ಣುತತ್ತನುಜಾತಂ ನರಸಿಂಹನಾ-
ತನ ಮಗಂ ಬಲ್ಲಾಳನಾತಂಗೆ ಸೂ-
5 ನು ನೃಸಿಂಹಂ ಮೆಗರಾಧಿರಾಯಲಯಕಾಳಂ ಚೋಳನಿಸ್ತಾರಕಂ ॥ ಕಡಿತಕ್ಕೋಟೆತ್ತು ನಾಲ್ಕುಂ ಕಡಲ
ಕಡೆನರಂ ಧಾತ್ರಿ ಕೀರ್ತ್ತಿಸ್ರಜಂ ಸೋಮ್ಮರ್ಡಿಗ-
6 ಳ್ಗೋಟೆತ್ತು ದಿಕ್ಕಾಂತಯೆರ್ಗೆ ಸಕಳದಿಕ್ಪಾಳಕರುತ್ತಂಸಮಂ ಪಾಯ್ದೊರ್ದೋಟಿತಾತ್ಜ್ಞಾ ಸಿಂಹಾಸನಮು-
ನೊಸೆದು ತಾನೇಱೆ ಕುಳ್ಳಿಪ್ಪೆಂದೇಂ

7 ನೂರ್ಮ್ಮಡಿವೀರಂ ನಾರಸಿಂಹಂ ಯೆದುಕುಳತಿಳಕಂ ಸೋಮವಂಶಪ್ರದೀಪಂ ॥ ಕಂ ॥ ಆ ನಾರಸಿಂಹದೇವಸೆ-
ಭಾನಳಿನೀರಾಜಹಂಸನಾಶ್ರಿತಜನತಾದಾನಾಭಿಮಾನನಮಿತಚಮೂ-
8 ನಾಥಂ ರಾಯೆದಂಡನಾಯಕಹನುಮಂ ॥ ಆತನ ಕಲಿಬಲ್ಲಾಳನ ತಾತನ ಪದ್ಮಾಂಬಿಕಾಪವಿತ್ರೋದರ-
ಸಂಜಾತನ ಭಾರಧ್ವಾಜಖ್ಯಾತನ ಕಾ(ಂ)ಣ್ವನ್ವಯೋಭಿಜಾತನ ಜನಕ-
9 ರು ॥ ಪುರುಷತ್ರಯವೊ ಮೇಣೆದು ಪುರುಷಾರ್ತ್ಥತ್ರಯವೊ ಪೇಳಿಮೆನೆ ಮೂವರ್ಸ್ಸೋದರರುಂ ಪೆಸ-
ರ್ವೆಡೆದೆರ್ವಾಮರಸಂ ಲಕುಮರಸನಮರದಂಡಾಧೀಶಂ ॥ ಆ
10 ಮೂವರೊಳಗ್ಗಭವಂ ವಾಮರಸಂ ವಿತರಣಯ್ಕಲಕ್ಷ್ಮೀವಿಕಚತ್ತಾಮರಸಂ ವೀರಗುಣೋದ್ದಾಮರಸಂ
ಪಡೆದೆ ಪುತ್ರನಮಿತಚಮೂಪಂ ॥ ಮೊನೆಯೊಳು ಮತ್ಕರಿಳ್ಗಂ
11 ಮನೆಯೊಳು ಮನುಮಂತ್ರಸಿದ್ಧಿ ಸಂಕಟದೊಳು ಮತ್ತನುವೆನಿಸ ಪತಿಹಿತಂ ರಾಯೆನ್ನಸಿಂಹನ ನಚ್ಚಿನಚ್ಚು
ಪೇಸೆಣಗನುಮಂ ॥ವೃತ್ತ ॥ ಇತಿಯೆಲು ಕಲುತ
12 ಬಳಿಕ್ಕವಿಲ್ಲ ಸರಿಭೆಂಗಂ ಶೌರ್ಯ್ಯದೊಳು ಚಾಗದೊಳು ಮೆಱೆಯೆಲು ಕಲ್ತ ಬಳಿಕ್ಕವಿಲ್ಲ ಕಲೆಕಂದೆವ್ರುದಾ-
ರ್ಯ್ಯದೊಳು ಪೆಮ್ಮೆರ್ಗಯಿಂ ಪೆಱರಾಪ್ರೊರ್ವಯ್ಸಳರಾಜ್ಯದೊಳು ಪೆಸರ್ಗೊರ್ವ-
13 ಳಲು ದಂಡಾಧಿಪರ್ಮಿಸಲೇಱೆವೆಂ ಗೋಸುಗೆ ಚಾಗಮಿವನಮಿತಂ ಸೌರ್ಯ್ಯಾಂಜನಾನಂದನಂ। ಅಮಿತಂ
ರಾಯೆನ್ನಸಿಂಹಪೇಸೆಣಹನೂಮಂ ವೀರದೊಳು ಚಾಗದೊಳ್
14 ಹಿಮಸೇತುಪ್ರತಿಬದ್ಧಮಪ್ಪ ಜಸಮಂ ಕಯ್ಕೊಂಡನಾ ತಂದೆಯಿಂದೆ ನುಗಂ ವೀರನುವಾರನೆಂಬ ಗುಣದಿಂ-
ದೋಪಿರ್ದ್ದಪಂ ತಂದೆಗೊಂದು ಮುಖಕಗ್ಗಳನೊದೆ ಷ-
15 ಣ್ಮುಖನವೊಲು ಬಲಾಲ್ಲಳದಂಡಾಧಿಪಂ ॥ ಇದು ಸತ್ಯಂ ಪಗೆಮೆಚ್ಚೆಗಂಡನ ಸುತಂ ಬಲಾಲ್ಲಳದಂಡಾಧಿಪಂ
ಕದನಂ ಬೊಕ್ಕಬಳಿಕ್ಕವಾ ರಳುಜನಂತಾ ಪಾರ್ತ್ಥನಾ ಭೀಮನಾ ಮದ-
16 ನಧ್ವಂಸಕನಾ ಹಿರ್(ಂ)ಣ್ಯಕಸಿಪುಪ್ರಧ್ವಂಸಿಯಾ ಕಾಲನಾ ತ್ರಿದಶಾಧೀಶ್ವರನಾ ಸಹಸ್ರಭುಜನಾ ಗಾಂಗೇ
ಯನಾ ಷಣ್ಮುಖಂ ॥ ಸುರಗುರು ಲಗ್ನಮಂ ಕುಡೆ ವಿರಿಂಚಿ ಚಿರಾ-
17 ಯುವನೀಯೆ ಲಕ್ಷ್ಮ್ಯಯಂ ಹರಿ ದಯೆಗೆಯ್ಯೆ ಶಂಭು ಜಯಮಂ ಕುಡೆ ಭಾರತಿ ಬಲ್ಮೆಯೆಲ್ಲಮುಂ ನಿರವಿಸೆ
ಮಂತ್ರಿಬಲ್ಲುಗಿಗೆ ಪುಟ್ಟಿದನೀ ನರಸಿಂಹನಳ್ಕೆಲ್ಲಂ ಸ್ಥಿರತರಪು-
18 ಣ್ಯಮೂರ್ತ್ತಿ ಕುಲದುಂನತಪುಂಣ್ಯದೆ ಪುಂಜಮೆಂಬಿನಂ ॥ ಮತ್ತಂ ವಮಿತಚಮೂಪನ ನಾಮಾವಳಿ ಯೆನ್ತೆಂ
ದಡೆ ॥ ಪುಹಾಪ್ರಚಂಡದಂಡನಾಥ ಲಕ್ಷ್ಮೀಧರದೇವ ವೀರಲಕ್ಷ್ಮೀವಿ-
19 ಳಾಸಾವಾಸ ಪ್ರಧಾನಕರಿಕಳಭಯೂಥನಾಥ ಶ್ರೀಮದಮರೇಶ್ವರದೇವರ ಕೀರ್ತ್ತಿನರ್ತ್ತಕೀನರ್ತ್ತನವಿಶಾ-
ಳರಂಗ ಸಕಳಕುಳರಾಜಿತವಾಜಿವೆಂಕಚೂಡಾಮಣಿ ವಾಮರಾಜಪ್ರಿಯತನೂ-
20 ಜಾತ ರೂಪು ರೇಖೆ ಥಾಪನೆ ಬಯ್ಸಿಕೆ ತೊಡೆಮಡಕಯ್ದೆನಿಯೆಂಬ ಚಡಾಯತಿಕೆ ಗಾಯತಿಕೆವೆಡೆದಾರೂ-
ಢವಿದ್ಯಾವಿಳಾಸ । ಸಬಳದ ಸೆಲ್ಲಹದ ಕುಂತದಹಥಳದ ಕುದುರೆ-
21 ಗಾಳಿಗದ ಬಿನಣದೊಳು(ಂ)ನ್ನತಿಕೆವೆಡೆದ ಸುಭಟಸೆವಾರಿಚೂಡಾರತ್ನ ಸಬಳತ್ರಿನೇತ್ರ ಬಿರುದಿನಣಕಕ್ಕೆ
ಸೆಣಸಿ ಮೆಚ್ಚರಿಪಂಗೆ ತ(ಂ)ನ್ನವಾರುವಮಂ ವಿ(ಂ)ನ್ನವಿತ್ತು ಮು(ಂ)ನ್ನ ಪಾರ್ವಿ-
22 ಸಿ ಮುರಾರಿಯೊಳು ದೆಖ್ಖಾದೆಖ್ಖಿಯೊಳು ಕಾದಿ ತಳ್ತಿಱೆದು ಗೆಲ್ದು ತುರುಗದಳಮಂ ತಂದೆ ಪಗೆಮೆಚ್ಚೆಗಂ-
ಡ ದೀನಾನಾಥಕಥಕಪು(ಂ)ಣ್ಯಪಾಠಕಾದಿನಾನಾಯಾಚಕಜನಜಂ-
23 ಗಮೆಪಾರಿಜಾತ ಭಟ್ಟಜನುತಾಂಧವ ಬೊಪ್ಪನಂಕಕಾಱ । ಕಂದುಕನೀಱರಣರಂಗಸಿಂಗ ವೆಡೆಯವೆಡಂಗ
ಮುರಾರಿಥಟ್ಟದಿಶಾಪಟ್ಟ ಸಂಗ್ರಾಮಜತ್ತಲಟ್ಟ ಚಲದಂಕರಾಮ ವೀರನ-
24 ರಸಿಂಹಪೇಳಳಹನೂಮಂತ ವೀರವಿಳಾಸಿನೀನಯನಕಾಂತ ವಾರನಾರೀಚಿತ್ತಚಮತ್ಕಾರರೂಪ ಶ್ರೀಮದೆ-
ಮಿತಚಮೂಪ ಸ್ಥಿರಂ ಜೀಬ್ಯಾತ್ ॥ ಖುರಪೀತಾಭ್ರಾಂಗಣಂ
25 ಸಿಂಗಣನ್ರಿಪನ ಹಯಶ್ರೇಣಿ ಕಳ್ಪಾಂತಧಾರಾಧರಮಲ್ಲಾಮಲ್ಲಯೊಳು ಯಾದವಗಜಘಟೆಯೊಳು ತಳ್ತು-
ದಾಯುದ್ಧಮೆಧ್ಯಕ್ಕುರಿಲಿಂಗಂ ನಿಲ್ವವೊಲು ನಿಂದೇಳೆಜೆ ಪೇಳೆಜೆ
26 ಮಾಕೆರ್ಕ್ಕಂಡು ಬೆಂಕೊಂಡು ಕೊಂಡಂ ತುರಗಬ್ರಾತಂಗಳಂ ನೇಜಿಲಿಗೆಯೊಳಮಿತಂ ದಂಡನಾಥಾಂಜನೇ-
ಯಂ ॥ ಇಲ್ಲಿದೆ ರಣಂಗಳಂ ತಣಿದೆ ರೋಚಕಮಾಯ್ತು
27 ಜವಂಗೆ ನಾರದಂ ನೆಚೆ ಕಲಹೇಕ್ಷಣಕ್ಕಲಸಿದಂ ಬಿಸುನೆತ್ತರ ನಕ್ಕಿಸಲು ನೆಲಂ ನೆಚೆಯೆದು ಭೂತಕೋಟಿ
ಪೆಣನಂ ನೆಣನಂ ಬರಿತೀನಿ ತಿಂದು ಕಟ್ಟಱನೆಯನಾನ್ತುನೆಂತಮಿತನಂ ಪೊ-
28 ಗಳ್ವಂ ಪಗೆಮೆಚ್ಚೆಗಂಡನಂ ॥ ಮನು ಕಲಿಯೆಲ್ಲ ಶೌಚಿ ದಿಕಕಂಟನಣಂಕಲಿ ಶೌಚಿಯೆಲ್ಲಗುರ್ವ್ವಿನ ಸುರ-
ಸಿಂಧುಸೊನು ಕಲಿಯುಂ ಶುಚಿಯುಂ ಪತಿಭಕ್ತನಲ್ಲ ನೆಟ್ಟನೆ ದಿಟದಿಂದೆ ಸಂದೆ

29 ಕಲಿಯುಂ ಕುಚಿಯುಂ ಪತಿಭಕ್ತಿಯುಕ್ತನುಂ ಹನುಮನೆನದೋರ್ವ್ವನಂದಮಿತನಿಂದು ವಿಚಾರಿಸುವಂ-
ದು ಧಾತ್ರಿಯೊಳು ॥ ಅಸದ್ರಿಕವಿಂದುವೆಂಡಳವದಿಂದೆಮ್ರಿ-

30 ತೋಜ್ವಳಕೀರ್ತ್ತಿಕಾಂತಿಗೀಕ್ಷಿಸೆ ಕಜೆವುಳ್ಳಿದೊಂದು ಕಜೆಯಿಲ್ಲದುದೊಂದೆಜೆಂದವೆಂದು ಹೋಲಿಸಿದಪೆ-
ನಿಂದು ನಾಳೆ ರಿಪುಹರ್ಮ್ಯತಳಂಗಳ ಮೇಲೆ ತಳ್ತಪೆರ್ವ್ವಸಲೆಗೆ ಸಾಯ್ಕುವಿಂ-

31 ದುವಮ್ರಿತಂ ಬಳಿಕಂದೆಣೆ ಚಂದ್ರಮೆಂಡಳಂ ॥ ವಿದಿತಕಳಂಕನಲ್ಲದೆ ಕಳಾಧರನುದ್ಧತಗೋತ್ರವೈರಿಯೆಲ್ಲದೆ
ವಿಬುಧಾಧಿಪಂ ಕುವಳೆಯದ್ವಿಷನಲ್ಲದಿನಂ ದ್ವಿಜಿಹ್ವನಲ್ಲದ

32 ನುತಭೋಗಿ ಭಂಗಯುತನಲ್ಲದೆ ಚಾರುಗುಣಾಂಬುರಾಸಿಯೆಂಬುದು ಜಗವರ್ತ್ಥಿಯಿಂದಮಿತನಂ
ಧುರದೊಳು ಪಗೆಮೆಚ್ಚೆಗಂಡನಂ ॥ ಸೆನಿವಾರದೊಳೀಯಲು ಕಲುತಿನವಾರ-

33 ದೊಳು ಜಯಿಪ್ಪ ದಂಡಾಧಿಪರಂ ನೆನವುದೆ ಪೇಳಹನುಮನನವರತವಿನೋದದಾನಿಯಂ ಹೊಗಳ್ವೆಡೆ-
ಯೊಳೂ ॥ ಪ್ರತಿದಿನವುದ್ಯಾಪನಮುಖ್ಯತೆಯಿಂ ಹಲವು ಬ್ರತಂ

34 ಗಳಂ ಚರಿಯಿಸಿಯುಂ ವಿತರಣವ್ರಂದನೆ ಜನ್ಮಬ್ರತವೆಂದೆನುತಿಪ್ಪುದಾರನಮಿತಚಮೂಪಂ ॥ ಧರೆಯೊಳಜ-
ಹರಿಹರರರ್ತ್ತಾಂ ವಿರಚಿಸಿದರೋ ಬೆಂಣ್ಣೆಕಲ್ಲೊಳವಿಳವೆಟ ಗ್ರಿ-

35 ಹೋತ್ಕರಮೆನೆನೆ ಮಾಡಿಸಿದ ವಾವೆರಸನ ಸುತನಮಿತದಣ್ಣನಾಯಕ ಹನುಮಂ ॥ವೃತ್ತ॥ ಕ್ಷ್ಣೋ ಗಂಭೀರ-
ಸ್ಫಾರವೇಳಾಬಹಳಪರಿವ್ರಢಲೊಲ್ಲೋಲಕಲ್ಲೋಲಮಾಲಾರಂಭಪ್ರೌಢ್ಯನಘೇನ-

36 ಪ್ರಬಳಜಳಚರಲೊಲ್ಲೋಕಪಾತೀನಕುಂಭೆತ್ಕುಂಭೀರಾಭೀಳನಕ್ರಪ್ರಕರಕಮದನೀರೇಭರತ್ನ ಪ್ರಭಾವೋಜ್ರುಂ -
ಭಪ್ರೌದ್ಯಾಸಿವೀಚೀನಿಚಯಘನಘನಧ್ವಾನರೌದ್ರಂ ಸಮುದ್ರಂ ॥

37 ಅಂತಾ ಸಮುದ್ರಮುದ್ರಿತಮಂತಿಳೆಯೊಳಗೊಪ್ಪಿ ತೋರ್ಪ್ಪ ಜಂಬೂದ್ವೀಪಕ್ಕಂತಲ್ಲಿ ಮಧ್ಯಮೇರುವಿನಿಂ
ತಂಕಲು ಭೋಗಭೂಮಿ ಭಾರತವರ್ಷಂ ॥ ಅಂತಾ ಭರತಾವನಿಯೊಳು ಕುಂತ-

38 ಳದೇಶಂ ನಿಸರ್ಗ್ಗಕಾಮದುಘಂ ತಾನೆಂತೆನೆ ನೋಣಂಬವಾಡಿಯೆನೆಂತಬ್ಜಜ ಕೀರ್ತ್ತಿಸಲು ಸಮರ್ತ್ಥನೇ
ಜಗದೊಳು ॥ ಸಾಗರದಂತೆಜಸ್ರಜಳಪೂರ್ಣತಟಾಕಚಯಂಗಳಿಂ ವನಂ ಪೂಗ-

39 ಮಹೀರುಹಂ ಕದಳಿತಂಗುಲವಂಗತಮಾಳಜಾಳದಿಂದೆ ಬಾಗಿ ಫಲಂಗಳಿಂದೆಸವ ಕಯ್ವೊಲನೊಪ್ಪುವ ಗಂಧ-
ಶಾಳಿಯಿಂವಾಗಳು ಬೆ(ಂ)ಣ್ಣೆಕಲ್ಲೆಸೆದು ತೋರ್ಪ್ಪುದು ಕೋಗಳಿನಾಡೊ-

40 ಳರ್ತ್ಥಿಯಿಂ ॥ಮತ್ತಂ॥ ಸಿರಿಸಂ ಕಂಮ್ಮರನೀಳೆ ಬಾಳೆ ವಕುಳಂ ದಾಳಿಂಬವಶ್ಕಾದತಾಳಗೆ ನೇತೆಲ್ಫನಸಾಂ
ಬ್ರವತ್ತಿ ತಿಳಕಂ ಕಂಕೆಲ್ಲಪ್ರ(ಂ)ನ್ನಾಗ ಪಾದರಿ ಪೂಗದೈಮ ಕೌಂಗು ತೆಂ-

41 ಗು ಬದರಿ ಖರ್ಜ್ಜೂರ ನಾರಂಗ ಕ್ಷೀರವೆಂದಿಂತಿವಱಿಂದ ರಂಜಿಸಿವುದುದ್ಯಾನಂ ಪುರೋಪಾಂತದೊಳು ॥
ಕಂದೆ॥ ಶುಕಪಿಕಮರಾಳಕ್ಷೇಕಿಪ್ರಕರೆಚಕೋರದ್ವಿರೇಫಸಂಕುಳಿದ ರವಂ

42 ಪ್ರಕಟಿಸೆಲುದ್ಯಾನವನಂ ಮಕರಧ್ವಜನಿಕ್ಕೆದಾಣವೆನೆ ಸೊಗಯಿಸುಕುಂ ॥ ಶ್ರೀ ಸ್ವಸ್ತಿ ಸಮಸ್ತಭುವನಾ-
ಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ದ್ವಾರಾವ-

43 ತೀಪುರವರಾಧೀಶ್ವರಂ ಯಾದವಕುಳಾಂಬರದ್ಯುಮಣಿ ಸಮ್ಯಕ್ತ ಚೂಡಾಮಣಿ ಮಲೆರಾಜರಾಜನಪ್ರತಿ-
ಮಲ್ಲಜ ಮಲಪರೊಳ್ಗಂಡ ಗಂಡಭೀರುಂಡನಸಹಾಯಶೂರ ಮಂದರಧೀರ ಕ-

44 ನಿವಾರಸಿದ್ಧಿ ಕರಣಾಗತವಾರ್ದ್ಧಿ ಗಿರಿದುರ್ಗ್ಗಮೆಲ್ಲ ವೈರಿಶಿರಸೆಲ್ಲ ಚಲದಂಕರಾಮನಹಿತಗಜಭೀಮ
ಚೋಳೆರಾಯರಾಜ್ಯೋದ್ಧಾರಕ ಮಗರಾಧಿರಾಯಸೈನ್ಯಸಂಹಾರಕ ಚೋಳನ-

45 ಲ್ಲೂರಪುರಕಾಳಾಗ್ನಿರುದ್ರ ಆರಳೊತ್ತಳದುರ್ಗನೀರದೆಲಯಾನಿಳಂ ದ್ರವಿಳಮಂಡಳನಿರ್ದ್ದೂಮಧೂ-
ಮಂ ಬಾಣೋದರೆಯೆ ಗಜಘಟಾಸಹಿತಸಪ್ತಾಂಗಗ್ರಹಣಭಿಜಬಳಮಲ್ಲಂ ನಿಶ್ಶಂಕ-

46 ಪ್ರತಾಪಚಕ್ರವರ್ತ್ತಿ ಹೊಯ್ಸಳಶ್ರೀವೀರನಾರಸಿಂಹದೇವರು ಪೂರ್ವ್ವದಿಗ್ವಿಜಯದೊಳಪೂರ್ವ್ವಸಾಧಿತ-
ಕರಿತುರಗರತ್ನವೆಸ್ತುವಿಸಾಧಿತಬಿಜಯೆಲಕ್ಷ್ಮೀವಿಳಾಸಮೆಸೆಯೆ ನಿಜರಾಜಧಾ-

47 ನಿ ದೋರಸಮುದ್ರದ ನೆಲೆವೀಡಿನೊಳ್ಸುಖಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯ್ಯುತ್ತಮಿರೆ
ತತ್ಪಾದಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನಂ ಮಹಾಪಸಾಯ್ತಂ ಯಾದವರಾ-

48 ಯದಕ್ಷಿದಕ್ಷಣಭುಜದಂಡಂ ಪಗೆಮೆಚ್ಚೆಗಂಡಂ ರಾಯನರಸಿಂಹಪೋಷಣಹನೂಮಂತಂ ಹಯಾರೂಢ-
ರೇಖಾರೇವಂತಂ ಸಬಳತ್ರಿನೇತ್ರ ಸಜ್ಜನಮಿತ್ರನಾರೂಢವಿದ್ಯಾವಿಳಾಸ ವೀರವಿ-

49 ಜಯಲಕ್ಷ್ಮೀನಿತ್ಯನಿವಾಸನಮಿತಯ್ಯದೆಂಡನಾಯಕರು ನೋಣಂಬವಾಡಿನಾಡೊಣಗಣ ಕೋಗಳಿಯೆಯಿ-
ನೂಱು ಬೆಂಣೆಕಲ್ಲು ಸಂನೆರೆಡಕ್ಕಂ ಮುಖ್ಯವಾದ ಬೆ(ಂ)ಣ್ಣೆಕ-

50 ಲ್ಲಗ್ರಾಮದೆಲು ತಾವೆತಿಸಿದ ದೇವತಾಲಯಂಗಳಲು ಸುಪ್ರತಿಷ್ಠಿತರಾದ ಶ್ರೀಪದ್ಮಲೇಶ್ವರದೇವರ ಶ್ರೀಮದ-
ಮಿತೇಶ್ವರದೇವರ ಶ್ರೀಲಕ್ಷ್ಮೀನಾರಣದೇವರ ಶ್ರೀವಾಮೇಶ್ವರದೇವರ ಶ್ರೀಬಲ್ಲಾ-

51 ಳೀಕ್ವರದೇವರ ಶ್ರೀನರಸಿಂಹದೇವರ ಅಂಗಭೋಗರಂಗಪೂಜೆಗಂ ನಿತ್ಯನೈಮಿತ್ತಿಕನೈವೇದ್ಯಕಂ ಚೈತ್ರ-
ಪವಿತ್ರಾದಿಪಂಚಪರ್ವ್ವಂಗಳ್ಗಂ ಖಂಡಸ್ಫುಟಿತಜೀರ್ಣೋದ್ಧಾರಕವೆಂದೆಂದಿಂಗಂ ಸಲ್ವಂತಾಗಿ ಪಾದ-
ಪೂಜೆ-

52 ಯ ತೆತ್ತು ಶ್ರೀವೀರನಾರಸಿಂಹದೇವರ ಶ್ರೀಹಸ್ತದಿಂ ಶ್ರೀವೆಜ್ರೀಕ್ವರದೇವರ ಸೋಮನಾಥದೇವರ ಸ(ಂ)ನ್ನಿ-
ಧಾನದೊಳು ಶಕವರ್ಷ ೧೧೪೪ನೆಯ ಬ್ಯಯಸಂವತ್ಸರ ಚೈತ್ರ ಸುದ್ಧ ಏಕಾದಶೀ ಆದಿ-

53 ತ್ಯವಾರವುತ್ತರಾಯಣಸಂಕ್ರಮಾಣ ಬ್ಯತೀಪಾತದಂದು ಬೆಂಣೆಕಲ್ಲು ಭೂಮಿಯೊಳಗೆ ವೊರಡಿಯ ಮಾ-
ಚಿಸೆಟ್ಟಿಯ ಚಿಂಚಗಟ್ಟದ ಕೆಳಗಣ ಗುಯ್ಯೋಲ ಗದ್ದೆ ಮತ್ತರು ೨ ಕಂಬ ೬೪೪ ಕುಂ-

54 ಬಾಅರ ಗುಯ್ಯೋಲಗದ್ದೆ ಕಂಬ ೫೩೯ ಮಣಿಯಮಗೌಡನ ಮಾಚಗೌಡನ ಕೆಱೆಯ ಕೆಳಗಣ ಗದ್ದೆ ಮತ್ತ-
ರು ೩ ಗದ್ದೆ ಕಂಬ ೬೨೦ ಅಡಕೆದೋಟ ಕಂಬ೨೦೦ ಅನ್ತು ಮತ್ತರು ೭ ಕಂಬ ೮೪೫ ಆ ಬೆದ್ದೆಲೂರ
ಮುಂದಣಕೆಯಿ

55 ಮತ್ತರು ೨ ಹೊಲಗೇರಿಯ ಬಡಗಣ ಕೆಯಿ ಮತ್ತರು ೪ ಕಂಬ ೭೦೬ ಕುಂಬಾಅರ ಗುಯ್ಯೋಲ ಚಿಂಚಗ-
ಟ್ಟದ ಬಡಗಹಾಳಕೆಯಿ ಸಹಿತ ಮತ್ತರು ೬ ಕಂಬ ೯೭ ಅನ್ತು ಕೆಯಿ ಮತ್ತರು ೧೨ ಕಂಬ ೮೦೩ ಆ
ಭೂಮಿಯೆ

56 ಚತುಸೀಮೆ ಮೂಡಲು ಹೆಬ್ಬುಣುಸೆಯ ಹಳ್ಳ ವುಪ್ಪಿನ ವೋಳೆ ತೆಂಕಲು ಕಱುಂಬಗದ್ದೆಯೆ ಬಾಯಿಕಲು
ಚಿಂಚಗಟ್ಟನಾಯಕರ ಗುಯ್ಯೋಲ ಹಳುಗಿನ ಸಳ್ಳದ ಮೂಡಣ ಬದುಹಿನ ನಟ್ಟ ಕಲು

57 ಮೇರೆ । ಪಡುವಲು ಮಾಡೂರಿಂಗೆ ಹೋಹ ಹೆವಾರಿ ಮೇರೆ ಬಡಗಲು ಹೊಟ್ಟೆಯಹಳ್ಳ ಮೇರೆ ॥ ಇ ದೇವ-
ರ್ಗ್ಗೆ ಬೆಂಣೆಕಲ್ಲು ಹಂನೆರಡಹೊಳಿಗಣ ಹಳ್ಳಿ ಮಾನಿಲಿಯ್ಮಂ ಸರ್ವ್ವಾಬಾಧೆಪರಿಹಾರ ಸ-

58 ರ್ವ್ವನಮೆಕ್ಕಮಾಗಿಆಚಂದ್ರಾರ್ಕ್ಕತಾರಂಬರಂ ಸಲುವಂತಾಗಿ ಧಾರಾಪೂರ್ವ್ವಕವಾಗಿ ಹಡದು ಬಿಟ್ಟ ದತ್ತಿ ॥
ಆ ಮಾನಿಲಿಯೆ ಚತುಸೀಮೆ ॥ ಮೂಡಲು ಹೊಟ್ಟೆಯಹಳ್ಳ ಕೂಂಟೆಯಕೆಳೆ । ತೆಂಕಲು ದೊ-

59 ಡ್ಡೀರಿಯ ಕೆಳೆ । ಮಲ್ಲಿಯೆಬ್ಬೆಯ ಕೆಳೆ ಪಡುವಲು ಮಲ್ಲನ ವೊರಡಿ । ಬಡಗಲು ಹಗರೆ ಮೇರೆ ॥
ಸ್ವಸ್ತಿ ಶ್ರೀಮದಖಿಳಭುವನಜನಜನಿತಸಂಸಾರಸಾರಾವಾರಮೆದಜಳಮಹಾಪ್ರಯಾ-

60 ಸೋತ್ತುಂಗತರಂಗಭಗ್ನಮಗಾ್ನನೇಕಪ್ರಾಣಿಜಾತಿ(ಭಿ)ಪ್ರಭೃತಿಪ್ರಕ್ಷುಭಿತವೆರ್ತ್ತಗರ್ತಾಂತಃಪತಿತಶಿವಾ-
ನುಗ್ರಹೀತಶಿಷ್ಟಜನೋತ್ತರಣಕರಣನಾಮಧೆರ್ಯೋಪೇತಪ್ರರಂದರಬಲಿಂದಮಾರವಿಂದನೆಂದನಮುನಿ-
ದಿವ್ಯ-

61 ವಂದಿತಪಾದಾರವಿಂದಶ್ರೀಮಲ್ಲಕುಳೀಕ್ವರದೇವಮುಖಕಮಳವಿನಿರ್ಗ್ಗತಸಕಲಸಾಸ್ತ್ರತತ್ವಜ್ಞರುಂ ನಿಖಿಳ
ಧರ್ಮ್ಮಜ್ಞರುಂ ಯಮನಿಯಮಪ್ರಾಣಾಯಾಮಪ್ರತ್ಯಾಹಾರಾದಿನಿಜಕೃತ್ಯಕೈಯಾ-

62 ಕರಣಾನುರಕ್ತಸ್ವಾಂತಃಕರಣಪರಿಣತಿವಿಶೇಷಪರಾಕೃತಪ್ರತ್ಯವಾಯುರುಂ । ಸ್ವರ್ಗಾಪವರ್ಗ್ಗಮಾ-
ರ್ಗೋಪಾಯರುಂ । ಪರವಾದಿಘೆರಟ್ಟರುಂ । ಸರಸ್ವತೀಲಲಾಟಪಟ್ಟರುಂ । ಸಮವಾದಿಸರಭಭೀರುಂ-

63 ಡರುಂ । ತಪಪ್ರಭಾವತೇಜೋಮಾರ್ತ್ತಂಡರುಂ । ಅ(ಂ)ನ್ಯವಾನವಿನೋದರುಂ । ನಿಖಿಳಧರ್ಮಾಹ್ಲಾದರುಂ ।
ಅಭಿನವಪಾಕುಪತಸಮಯವಾರ್ದ್ಧಿವರ್দ্ধನಸುಧಾಕರರುಂ । ಮೇರುಸನ್ನಿಭಸ್ಥಿರರುಂ । ಸ್ವಕೀಯಾ-
ನು-

64 ಷ್ಠಾನನಿಷ್ಠಿತಮಹಿಮೋಪಾಜ್ಜಿತಸಪ್ತಾಹತ್ತರಿಸಾಹ್ವನಾಚಾರ್ಯರುಮೆಸ್ಪ ತಪಚಕ್ರವರ್ತ್ತಿ ಳಳೀಕ್ವರ-
ದೇವರನ್ವಯ ॥ ಕ್ಷಿತಿನುತಲಕುಳೀಕಸೋತ್ತಮಶಿಷ್ಯಲೋಕಸ್ತುತಯತಿ ಮುದಿನೀರಶ್ರೀಮ-

65 ಲೆಯಾಳದೇವಬ್ರತಿಕುಳಕಮಳಾರ್ಕಸ್ತತ್ಪ್ರಶಿಷ್ಯಸ್ವರ್ಗ್ಗಪೂಜ್ಯಾಂನ್ವಿತ ಭುವಿ ಜಯತು ಶ್ರೀಜ್ಞಾನರಾಸಿ-
ರ್ಮ್ಮುನೀಶಃ ತತ್ಪಿಷ್ಯಸ್ತಾಪಸಃ ಸ್ರೀಷ್ಠಃ ಸೋಮೇಶ್ವರಮಹಾಬ್ರತಿಃ ತನ್ಮುನಿಶಿಷ್ಯವಿಖ್ಯಾತೋ

66 ಶಾಂತರಾಸಿರ್ಯ್ಯತೀಶ್ವರಃ ॥ ಕಂದ॥ ಆ ಮುನಿಯ ಶಿಷ್ಯ ಭೃಗ್ವಿಶ್ವಾಮಿತ್ರಾಂಗಿರಸಕಪಿಲಸನಕಾದಿಮುನಿ-
ಸ್ತೋಮತರ್ತ್ತಮಗೆಣೆಯೆನಲಂತಾ ಮಹಿಮೆಯಂ ತಾಳ್ದಿದಂ ಕಳೀಕಮುನೀಶಂ ॥ ಅವ-

67 ರ ಶಿಷ್ಯ ॥ ಜಯತು ಬುಧನಿಧಾನಃ । ಕಲ್ಪಧಾತ್ರೀಜದಾನಃ । ಬ್ರತಿಕುಳಸುರಧೇನುಃ । ಸೂರಿವಕ್ತ್ರಾಬ್ಜ-
ಭಾನುಃ ॥ ಪ್ರಕಟವಿಮಳಕೀರ್ತ್ತಿಃ । ಪು(ಂ)ಣ್ಯಪುಂಜೈಕಮೂರ್ತ್ತಿಃ । ಸ್ವಮತಜಳಧಿಚಂದ್ರಃ । ಶ್ರೀ-

68 ಕಳೀಕಬ್ರತೀಂದ್ರಃ ॥ ವೃತ್ತ॥ ಧಾರಿಣಿಯೊಳು ವಿರಾಜಿಸುವ ಕಲ್ಪಕುಜಂ ಜಿಡೆವೊತ್ತುದೋ । ರಸಾಧಾರಮ
ತಾಳ್ದಿತೋ ಪರುಸೆಲಾಕುಳಮಂ ಧರಿಸಿತ್ತೋ ಮೀಱುಳಾಸಾರಮ ಕಾಮಧೇನು ತ-

69 ಳಯಿತ್ತನೆ ತಾಪಸವೀಸದಿಂದೆ ಲಕ್ಷ್ಮೀರಮನೀ ಕಳೀಕ್ವರನ ಕೀರ್ತ್ತಿಸುವಬ್ಬುರ್ಧರೊಲ್ದುಸಂತತಂ ॥ ಸ್ಮೃ-
ರನ ಸಮೊ . . . ಡಱೆ ತಾಪಸನಾದನೋ ಕಳ್ವಭೂರುಹಂ ಧರೆಯೊಳೆ ಕಳ್ಕಿಗಂದುಗಿದು ತಾಂ ಯೆ..

70 ತಿಯಾದೆನೋಗಸ್ತ್ಯನುದ್ಧುದೆಚ್ಚರದೊಳೆ ಮೇರೆ ಬಳ್ಕ ವ್ರತಿಯಾದೆನೋ ಪೇಳೆನಲೊಪ್ಪುತಿರ್ಪ್ಪನಾಕ್ಷ್ಯ-
ಯ್ಯರ್ ಮುನೀಶ್ವರಂ ನಿಖಿಳಲಕ್ಷ್ಮಿಗಧೀಶ್ವರನೀ ಕಳೀಶ್ವರಂ ॥ ಮತ್ತಮೀ ದೇವರ್ಗ್ಗಂ ದೇವರ ದತ್ತಿ-
ಸ್ಥಳಿಕಂ

71 ಕೊಂಗಳಿಯ್ಯೆನೂಱಱ ತಪಚಕ್ರವರ್ತ್ತಿ ರಾಜಗುರು ಕಳೀಶ್ವರದೇವರ ಶ್ರೀಪಾದಪ್ರಕ್ಷಾಳನಂ ಮಾಡಿ ಮಹಾ-
ಪ್ರಧಾನಂ ಅಮಿತ್ತೆಯ್ಯೆದಣ್ಣಾಯಕರು ಶ್ರೀಮತ್ಪ್ರತಾಪಚಕ್ರವರ್ತ್ತಿ ಶ್ರೀವೀರನಾರಸಿಂಹದೇವರ
ಕಯ್ಯೆ-

72 ಲು ಧಾರಾಪೂರ್ವ್ವಕಂ ಮಾಡಿಸಿಕೊಟ್ಟರು ॥ ಮತ್ತವಾ ಬೆ(ಂ)ಣ್ಣೆಕಲ್ಲು ಹನ್ನೆರಡಱ ಅಮಿತೆಯನಾಯಕ
ಹರಿಚ್ಚೆಯನಾಯಕನು ವೊರೊಡೆಯರುಂ ಆ ಹ(ಂ)ನ್ನೆರಡು ಹಳ್ಳಿಯ

73 ಗೌಡುಗಳುಂ ಎಂಟು ಸಿಟು ಬ್ಯಸೆವಕಳು ಮುಖ್ಯವಾಗಿ ಆ ಅಮಿತೆಯನಾಯಕನ ಕಯ್ಯೆಲು ಧಾರಾಪೂ-
ರ್ವ್ವಕಂ ಮಾಡಿಸಿಕೊಟ್ಟರು ॥ ಇ ದೇವರಿಗೆ ಸಂತೆಯಾಯೆ ಕೊಡಕ್ಕರೆವಾನೆಂ-

74 ಣೆ । ಎಲೆ ಹೇಱಿಂಗೆ ೩೦೦ ಹಸೆರಕ್ಕೆ ಅಡಕೆ ೨ । ಇಂತೀ ಧರ್ಮ್ಮಮಂ ಪ್ರತಿಪಾಲಿಸಿದವರು ಗಂಗೆ ವಾರಣಾಶಿ-
ಕುರುಕ್ಷೇತ್ರದಲು ಸಹಸ್ರ ಕವಿಲೆಯಂ ಕೋಡುಂ ಕೊಳಗುಮಂ ಸುವರ್ಣ್ಣದಿಂ ಪ[ಂ]ಚರತ್ನ-

75 ದಲು ಕಟ್ಟಿಸಿ ಚತುರ್ವ್ವೇದಪಾರಗರಪ್ಪ ಸಹಸ್ರಬ್ರಾಹ್ಮಣರಿಗುಭಯಮುಖಿಯಂ ಕೊಟ್ಟ ಫಲಮಕ್ಕು ॥
ಇ ಧರ್ಮ್ಮಮನಾರಾನುವಳಿದಾತನಾ ಗಂಗೆವಾರಣಾಸಿಕುರುಕ್ಷೇತ್ರ-

76 ದಲಾ ಕವಿಲೆಯಿವನಾ ಬ್ರಾಹ್ಮಣರುಮಂ ಕೊಂದೆ ಪಂಚಮಹಾಪಾತಕನಕ್ಕು ॥ ಸ್ವದತ್ತಂ ಪರದತ್ತಂ ವಾ
ಯೋ ಹರೇತಿ ವಸುಂಧರಾಂ ಷಷ್ಟಿವ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯೆ-

77 ತೀ ಕೃಮಿ[ಃ*] ॥ ಸಾಮಾನ್ಯೋಯಂ ಧರ್ಮಸೇತುಂ ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇಂದ್ರಾನ್ಭೂಯೋ ಭೂಯೋ ಯಾಚತೇ ರಾಮಚಂದ್ರಃ ॥
ಮಂಗಳ ಮಹಾಶ್ರೀ ಶ್ರೀ ಶ್ರೀ [॥*]

## No. 344.

(*A. R. No.* 72 *of* 1904.)

ON A PILLAR IN FRONT OF THE CENTRAL SHRINE OF THE KALLESVARA TEMPLE AT BAGALI, HARAPANAHALLI TALUK, SAME DISTRICT.

This is a composite record registering various gifts made at different periods. The first is dated the cyclic year **Sarvadhāri, Pushya 30, Bṛihaspativāra, Sūrya-grahaṇa** in the reign of the Hoysaḷa king **Narasiṅgadēva.** The details work out quite correctly for **A.D. 1228 December 28, Thursday** when there was a solar eclipse. The Narasiṁhadēva of the record must, therefore, be **Narasiṁha II.** A certain **Bommayya-Daṇṇāyaka** is stated to have made a gift of some land for the service of the god Kalidēva of **Bāguḷi.**

The second is dated **Sarvajit, Vaiśākha, ba. 10, Guruvāra** corresponding to **A.D. 1287 May 8, Thursday.** The fifty (*Mahājanas*) of Bāguḷi are stated to have made a gift of land for the service of the god Bidiraḥaḷḷi - Svāmidēva. In the third, some land is said to have been granted to **Vishṇughaisar** of **Gorūr** in **Khara, Chaitra śu. 7, Guruvāra = A.D. 1291 March 8, Thursday.** In the fourth a certain *Heggaḍe* (name lost) is said to have granted a portion of the toll-revenue for the service of the god Kalinātha on **Sunday, Bhādrapada ba. 30 of Āṅgirasa solar eclipse,** probably = **A. D. 1332 September 20 Sunday.** But on that day there was no solar eclipse. In the fifth, merchants of various countries are said to have granted one *tāra* of betel-leaves out of every *naḍe* for the service of the same god in **Nandana, Vaiśākha, śu. 15, Thursday 5** probably = **A.D. 1292 May 1, Thursday ; f.d.t. 87.** In the sixth, the Brāhmaṇs are stated to hāve been exempted from *sāmya* . . . and *vṛitti-vyāhāra* in **Sarvajit, Āshāḍha, śu. 5, Sōmavāra,** probably = **A. D. 1287 June 17 Wednesday** (the week day being an error). The seventh records a gift in **Khara, Mārgaśira, ba. 12** (not verifiable).

1 ಸ್ವಸ್ತಿ [॥*] ಶ್ರೀಮತುಹರಿಕ್ಷ್ವಂದ್ರೊದತ್ತಯ ಸಮಹಾ-
2 ಗ್ರಹಾರಂ ಬಾಗುಳಿಯು ಶ್ರೀಕ್ಷ್ವಯೆಂಭುಕಲಿ-

3 ದೇವರ ಶ್ರೀಗಂಧಕ್ಕೆ ಚೋಳರಾಜ್ಯಪ್ರತಿಷ್ಠಾಚಾ-
4 ರ್ಯ ಭುಜಬಳಚಕ್ರವರ್ತ್ತಿ ವೀರನಾರ-
5 ಸಿಂಗದೇವರ ಮಹಾಪ್ರಧಾನಂ ರಾಯಭೂಪಾ-
6 ಳಗಜಾಂಕುಷ ವಿಜಯವಿನೋದಿ ಬೊಮ್ಮಯ್ಯ(ಂ)ದಣ್ಣಾ-
7 ಯಕರು ಸರ್ಬ್ಬಧಾರಿಸಂವತ್ಸರದ ಪುಷ್ಯದಮಾ-
8 ವಾಸ್ಯೆ ಬ್ರಿಹಷ್ಪತಿವಾರ ಸೂರ್ಯ್ಯಗ್ರಹಣದ
9 ಪುಣ್ಯದಿನದಲು ಕೊಟ್ಟ ಪರಿವರ್ತ್ತಕಂ ಗ ೫ . . ಕ್ರಿ
10 . . . . . ಗ ೫ [॥] ಆರೊಬರಧಿಕಾರಿಗಳಾಗಿ ಇ
11 . . . . . ಇದನ . . ವರ್ಷಂಪ್ರತಿ [ಕೊಡುವ]-
12 ರು ಈ ಧರ್ಮ್ಮವ ಪ್ರತಿಪಾಳಿಸಿದವರು ವಾರಣಾಸಿಯಲು ಸಾ-
13 ಇರ ಬ್ರಾಹ್ಮಣರಿಗೆ ಸಾಯಿರ
14 ಕಪಿಲೆಯನುಭಯೆಮುಖಿಗೊಟ್ಟ ಫಲಮಕ್ಕು ಇ ಧರ್ಮ್ಮವನಳಿದಾತ ಪಂಚಮಹಾ-
15 ಪಾತಕನಕ್ಕುಂ ॥
16 ಶ್ರೀಮತು ಹರಿಕ್ಷ್ವಂದ್ರದತ್ತಿಯ ಮ-
17 ಹಾಅಗ್ರಹಾರಂ ಬಾಗುಳಿಯ
18 ಅಯ್ವದಿಂಬರು ಸರ್ವ್ವಜಿತುಸಂವತ್ಸ-
19 ರದ ವಯಿಶಾಖ ಬ ೧೦ ಗು ದಂ-
20 ದು ಬಿದಿರಹೆಳ್ಳಿಯ ಸ್ವಾಮಿದೇವರಿಗೆ
21 ಶ್ರೀಕಲಿದೇವರ ಶ್ರೀಮಾನ್ಯದೋಪಾ-
22 ದಿಯ ತೋಟ ಕಂಬ ೧೦೦ ಗದ್ದೆ ಕಂ-
23 ಬ ೩೦ ಎರೆಯ ಕೆಯಿ ಮತ್ತ-
24 ರು ೩ ಮನೆ ೧ ನೂಂ ಮಾನ್ಯವಾಗಿ ಬಿ-
25 ಟ್ಟರು ಶ್ರೀಕಲಿನಾಥ[॥*]
26 ಶ್ರೀಮತು ಹರಿಕ್ಷ್ವಂದ್ರದತ್ತಿಯ ಮಹಾ-
27 ಗ್ರಹಾರ ಬಾಗುಳಿ ಅಇವದಿಂಬರು ಖರ-
28 ಸಂವಛರದ ಚೈತ್ರ ಸು ೭ ಗು ದಂದು
29 [ಗೊ]ಆರ ವಿಷ್ಣ್ಣಭೈಸರಿಗೆ ಶ್ರೀಕಲಿ-
30 ದೇವಶ್ರೀಮಾ(ಂ)ನ್ಯದೋಪಾದಿಯಲಿ
31 ತೋಟ ಕಂಬ ೮೦ ಮಾನ್ಯವಾ-
32 ಗಿ ಬಿಟ್ಟರು ಶ್ರೀಕಲಿನಾಥ [॥*]
33 ಆಂಗಿರಸಸಂವಚ್ಛರದ ಭಾದ್ರಪದ
34 ಬ ೩೦ ಆ ಸೂರ್ಯ್ಯಗ್ರಹಣದಂದು
35 ಶ್ರೀಮತು ಹರಿಕ್ಷ್ವಂದ್ರದತ್ತಿಯ ಅಯ್ವದಿಂಬ-
36 ರ ಸಮಕ್ಷದಲು ಶ್ರೀಮಂ . . . .
37 . . ಂಗಳು . . . . ಸುಂಕದ ಹೆಗ್ಗಡೆ ಶ್ರೀ [ಕ]-
38 ಲಿನಾಥದೇವರ ನಂದಾದೀವಿಗೆಗೆ ತಿಂ ೧ ಕ್ಕೆ
39 ಎಲೆಯ ಹೇಟಿನ ಸುಂಕದೊಳಗೆ ಮೆ ೨ ಮ-
40 ಂ ಧಾರಾಪೂರ್ವ್ವಕವಾಗಿ ಕೊಟ್ಟರು
41 ಆಚಂದ್ರಾರ್ಕ್ಕತಾರಂ ಶ್ರೀ ಶ್ರೀ ಶ್ರೀ [॥*]
42 ಶ್ರೀಮತು ನಂದನಸಂವಛರದ ವೈಕಾಖ
43 ಸು ೧೫ ಗು ॥ ಶ್ರೀಮತು ಹರಿಕ್ಷ್ವಂದ್ರದ-
44 ತ್ತಿಯ ಬಾಗುಳಿಯ ಅಶೇಷಮಹಾಜ-
45 ನಂಗಳ ಸಮಕ್ಷದಲು ಸರ್ಬ್ಬರು ನಾನಾದೇಶಿ ತಂಬುಲಿಗ-
46 ರು ಶ್ರೀಸ್ವಯಂಭುಶ್ರೀಅಮೃತಲಿಂಗ ಶ್ರೀಕ-

47 ಲಿನಾಥದೇವರ ಗಂಧಕಸ್ಥುರಿಗೆ ಎಲೆಯ ನ-
48 ಡೆಗೆ ತಾರ ೧ ನು ಬಿಟ್ಟರು ಆಚಂ-
49 ದ್ರಾರ್ಕ್ಕತಾರಂಬರಂ ಮಂಗಳ ಮಹಾಶ್ರೀ ಶ್ರೀ
50 ಶ್ರೀ ಇ ಧರ್ಮ್ಮ ವಾರಿಕಾಱರೆತ್ತಿ ನಡಿಸುವರು
51 ಶ್ರೀ ಶ್ರೀ [॥*]
52 ಶ್ರೀಮದನಾದಿಯ ಅಗ್ರಹಾರಂ ಹರಿಶ್ಚಂ-
53 ದ್ರದತ್ತಿಯ ಬಾಗುಳಿಯ ಶ್ರೀಮದ-
54 ಶೇಷಮಹಾಜನಂಗಳು ಸರ್ವ್ವಜಿತುಸಂ-
55 ವತ್ಸರದ ಆಷಾಢ ಶು ೫ ಸೋ ಮಾಡಿದ ಗ್ರಾ-
56 ಮಸಮಯ ಯೀ ದಿನಂ ಮೊದಲಾಗಿ ಬ್ರಾ-
57 ಹ್ಮಣರಿಗೆ ಸಾಮ್ಯ . . . ಯಿಲ್ಲ ವ್ರಿತ್ತಿ-
58 ವ್ಯಾಹಾರವಿಲ್ಲ ಇದಂ ಮೀಱಿದವ-
59 ನು ಗ್ರಾಮದೆ೧ರೀಹಿ ಮೂವತ್ತಿಚ್ಛಾರ್ಸಿರಕ್ಕೆ
60 ಹೊಱಗು ವೂರ ಮೂ ಸ್ವಾ ಶ್ರೀಕಲಿನಾಥ[॥*]
61 ಶ್ರೀಮತು ಹರಿಶ್ಚಂದ್ರದತ್ತಿಯ ಮಹಾಗ್ರಹಾರಂ
62 ಬಾಗುಳಿಯಯ್ವದಿಂಬರು ಖರಸಂವತ್ಸರದ
63 ಮಾರ್ಗಶಿರ ಬ ೧೨ . . ಸಾಲಿಯ ವೀರಂಣನ
64 ಮಯ್ಯ ಕಾಳಓಜನು ಮಾಡಿದ . . . .
65 ೩೦೦ ಸರ್ವಮಾಂನ್ಯವಾಗಿ ಪ್ರತಿಪಾಳಿಸುವರು
66 ಮಂಗಳ ಮಹಾಶ್ರೀ ಶ್ರೀ [॥*]

## No. 345.

(*A. R. No.* 126-A *of* 1913.)

ON A SLAB SET UP IN THE VENUGOPALASVAMI TEMPLE AT MAGALA, HADAGALLI TALUK, SAME DISTRICT.

This record is engraved in continuation of No. 333. On the **10th day of Āśvayuja** of the cyclic year **Vijaya** ( = probably A.D. 1233-34) *Mahāvaḍḍavyavahāri* **Vāsudēva-Nāyaka** is said to have made a gift of 2 *gadyāṇas* for making a flower garden for the service of the god Gōpāladēva.

1 ವಿಜಯಸಂವತ್ಸರದ ಆಸ್ವಯಿಜ ಸು ೧೦ ದಂದು ಶ್ರೀಮದನಾದಿಯಗ್ರಹಾರಂ ಮಾಗೊಳದ ಯಿಂ-
2 ನೂರ್ವ್ವರ ಸಮಕ್ಷದಲು ಶ್ರೀಮನುಮಹಾವಡ್ಡಬ್ಯವಹಾರಿ ವಾಸುದೇವನಾಯ್ಕರು ಶ್ರೀ ಗೋ-
3 ಪಾಳದೇವರ ಹೂದೋಟಕ್ಕೆ ಗದ್ಯಾಣಂ ಎರಡನು ಬೂತರ ಕಲ್ಲಯನ ಮೇಲೆ ವೊಕಲುಗಡನಾಗಿ ಕೊಟ್ಟ-
4 ರು ಹೂಗಿಡುವನಿಕ್ಕಿ ಪುಱ್ಪವನು ದೇವರಿಗೆ ನಡಸುವ ಯೀ ಧರ್ಮ್ಮವನು ಯಿಂನೂರ್ವ್ವರು ಪಾಲಿಸು-
5 ವರು ಮಂಗಳ ಮಹಾಶ್ರೀ ಶ್ರೀ[॥*]

## No. 346.

(*A. R. No.* 33 *of* 1904.)

